ಜನಪದ ಸೇವಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಫೆಬ್ರವರಿ-೨೦೦೭ ಸಂಚಿಕೆ-೭



ಕಾಮಧೇನು ರಾಷ್ಟ್ರೀಯ ಪ್ರಾಣಿಯೆಂದು ಮಾನ್ಯವಾಗಲಿ

* **ಕಾಮಧೇನು ರಾಷ್ಟ್ರೀಯ ಪ್ರಾಣಿಯೆಂದು ಮಾನ್ಯವಾಗಲಿ**
- ಸುರೇಂದ್ರ ಕೌಲಗಿ ಪುಟ-೪

ಪಾಶ್ಚಾತ್ಯ ಅರ್ಥನೀತಿಯ ದಾಳಿಗೆ ತುತ್ತಾಗಿ ಇಂದು ಭಾರತ ತತ್ತರಿಸುತ್ತಿದೆ. ಕೆಲವರು ಮಾತ್ರ ಭಾರತ ಉನ್ನತಿಗೊಳ್ಳುತ್ತಿದೆಯೆಂಬ ಭ್ರಮೆಯಲ್ಲಿದ್ದಾರೆ. ನಿಜವಾದ ಭಾರತ ಎಂದಿಗೂ ಗ್ರಾಮಗಳಲ್ಲೆ. ಆದ್ದರಿಂದ ಗ್ರಾಮ ಜೀವನದ ಅರ್ಥವ್ಯವಸ್ಥೆಯ ಕೇಂದ್ರ ಬಿಂದುವಾದ ಕಾಮಧೇನುವನ್ನು ರಾಷ್ಟ್ರೀಯ ಪ್ರಾಣಿಯೆಂದು ಭಾರತೀಯರೆಲ್ಲರೂ ಮಾನ್ಯಮಾಡಬೇಕೆಂಬ ಅಂತರಾಳದ ಕರೆ ಈ ಲೇಖನದಲ್ಲಿದೆ.

* **ಭಾರತೀಯ ಸಂಸ್ಕೃತಿಯ ಬಗ್ಗೆ ಬಬ್ರುವಾಹನ ದೃಷ್ಟಿ ಅಗತ್ಯ**
- ವಾಸುದೇವ ಅಗರ್‌ವಾಲ ಪುಟ-೦

ಭಾರತದ ಸಂಸ್ಕೃತಿ ಹಲವಾರು ಧಾರೆಗಳ ಒಂದು ಪ್ರವಾಹವೇ ಆಗಿದೆ. ಇಂಥ ಶ್ರೇಷ್ಠ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಈ ಲೇಖನ ಪರಿಚಯಿಸಿಕೊಡುತ್ತದೆ.

* **ವೇದೋಕ್ತ ಯಜ್ಞಕರ್ಮ**
- ವಿನೋಬಾ ಪುಟ-೦

ಹಿಂದೂ ಧರ್ಮದ ಆಧಾರಶಿಲೆ ಕರ್ಮಫಲತ್ಯಾಗ. ಹೆಚ್ಚು ಕರ್ಮಗಳನ್ನು ಮಾಡಿದರೂ ಸಹ ಅದು ಅಂತಿಮವಾಗಿ ಕರ್ಮಗಳ ಸಂಕೋಲೆಯಿಂದ ಬಿಡುಗಡೆಗಾಗಿಯೇ ಎಂಬ ವಿಚಾರವನ್ನು ಈ ಲೇಖನದಿಂದ ತಿಳಿಯಬಹುದು.

* **ಭೋಗಿಗಳ ಮಧ್ಯೆ ಚಲಿಸುತ್ತರುವ ಓರ್ವ ಯೋಗಿ**
- ವಿಶ್ವೇಶ್ವರ ಭಟ್ ಪುಟ-೦

ಸ್ವಾಮಿ ವಿವೇಕಾನಂದರನ್ನು ವೀರಸನ್ಯಾಸಿಯೆಂದು ಕರೆಯಲಾಗುತ್ತದೆ. ಅವರ ಜೀವನ ತರುಣರಲ್ಲಿ ಜೀವನೋತ್ಸಾಹವನ್ನು ತುಂಬುವಂಥದಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಮಧ್ಯೆ ಜೀವನದ ನಗ್ನ ಸತ್ಯಗಳನ್ನು ಹೇಳುವ ಧೀರ ಓರ್ವ ಯೋಗಿ ತರುಣ ಸಾಗರ ಎಂಬುವವರು ಇದ್ದಾರೆ. ಅವರ ವ್ಯಕ್ತಿತ್ವದ ಪರಿಚಯ ಈ ಲೇಖನದಲ್ಲಿದೆ.

* **ಭಾರತ-ಪಾಕ್ ಸ್ನೇಹಕ್ಕಾಗಿ ಶಾಸ್ತ್ರಿಯವರ ಕೊಡುಗೆ**
- ಬಿ. ಆರ್. ಪ್ರಾಣೇಶ್‌ರಾವ್ ಪುಟ-೦

ಸ್ವತಂತ್ರ ಭಾರತದ ಎರಡನೆಯ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ೪೧ನೇ ಪುಣ್ಯ ತಿಥಿಯನ್ನು ಕಳೆದ ಜನವರಿ ೧೧ರಂದು ನಿಶ್ಯಬ್ದವಾಗಿ ಆಚರಿಸಲಾಯಿತು. ಭಾರತ-ಪಾಕ್ ಮಧ್ಯೆ ಶಾಂತಿ ಏರ್ಪಡಿಸುವ ಪ್ರಯತ್ನ ಇಂದಿಗೂ ನಡೆಯುತ್ತಿದೆ. ಶಾಸ್ತ್ರಿಯವರು ಈ ನಿಟ್ಟಿನಲ್ಲಿ ೧೯೬೬ರಲ್ಲಿ ಧೀರ ಪ್ರಯತ್ನವೊಂದನ್ನು ಮಾಡಿ ಅಮರರಾದರು. ಆ ಪ್ರಯತ್ನದ ಒಂದು ಐತಿಹಾಸಿಕ ಇಣಕು ನೋಟ ಈ ಲೇಖನದಲ್ಲಿದೆ.

* **ಜನಪದ ನಿಲಯದ ಅಂತರಂಗದಲ್ಲಿ . . .** [illegible] ಪುಟ-೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಫೆಬ್ರವರಿ–೨೦೦೭
ಸಂಪುಟ–೭
ಸಂಚಿಕೆ–೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೨೯೮೭೫೪
e-mail - janapada@yahoo.com

ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ
ಯೋಗ್ಯರಾಗಿ, ಭೋಗ್ಯರಾಗಿ,
ಭಾಗ್ಯವಂತರಾಗಿ ನೀವು

ಅನ್ನದಾನವ ಮಾಡುವರಾಗಿ
ಅನ್ನ ಛತ್ರವನ್ನಿಟ್ಟವರಾಗಿ
ಅನ್ಯ ವಾರ್ತೆಯ ಬಿಟ್ಟವರಾಗಿ
ಅನುದಿನ ಭಜನೆಯ ಮಾಡುವರಾಗಿ

ಮಾತಾಪಿತೃಗಳ ಸೇವಿಪರಾಗಿ
ಪಾಪಕಾರ್ಯವ ಬಿಟ್ಟವರಾಗಿ
ಜಾತಿಯಲಿ ಮಿಗಿಲಾದವರಾಗಿ
ನೀತಿ ಮಾರ್ಗದಲಿ ಖ್ಯಾತರಾಗಿ

ಗುರು ಕಾರುಣ್ಯವ ಪಡೆದವರಾಗಿ
ಗುರುವಿನ ಮರ್ಮವ ತಿಳಿದವರಾಗಿ
ಗುರುವಿನ ಪಾದವ ಸ್ಮರಿಸುವರಾಗಿ
ಪರಮ ಪುಣ್ಯವ ಮಾಡುವರಾಗಿ

ಪಕ್ಷಮಾಸ ವ್ರತ ಮಾಡುವರಾಗಿ
ಪಕ್ಷಿವಾಹನಗೆ ಪ್ರಿಯರಾಗಿ
ಕುಕ್ಷಿಲಿ ಕಲ್ಮಷ ಇಲ್ಲದವರಾಗಿ

ವೇದಪುರಾಣವ ತಿಳಿದವರಾಗಿ
ಮೇದಿನಿಯಾಳುವಂಥವರಾಗಿ
ಸಾಧು ಧರ್ಮವಾಚರಿಸುವರಾಗಿ
ಓದಿಗ್ರಂಥಗಳ ಪಂಡಿತರಾಗಿ

– ಪುರಂದರದಾಸರು
(ದಾಸರ ಆರಾಧನೆಯ ಸ್ಮರಣೆಯಲ್ಲಿ)

ವಿಚಾರ ದೀಪ್ತಿ

ಶ್ರೀಮಂತ ದೇಶಗಳ ರೈತರು ವ್ಯವಸಾಯವನ್ನು ತ್ಯಜಿಸುತ್ತಿದ್ದಾರೆ! ಅಲ್ಲಿಯ ರೈತರೆಲ್ಲರು ಬಹು ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿಗಳನ್ನು ಪಡೆಯುತ್ತಾರೆ. ಅವರೆಲ್ಲರೂ ಶಿಕ್ಷಿತರು ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿವುಳ್ಳವರೂ ಆಗಿದ್ದಾರೆ. ಅವರು ಭವಿಷ್ಯದಲ್ಲಿ ಸಂಭವಿಸಬಹುದಾದ ವ್ಯಾಪಾರದ ಹಾಗೂ ಪದಾರ್ಥಗಳ ವಿನಿಮಯದ ಲಾಭವನ್ನು ಪಡೆಯಲು ಸಮರ್ಥರಾಗಿದ್ದಾರೆ. ಸೂಪರ್ ಮಾರ್ಕೆಟ್‌ಗಳೊಂದಿಗೆ ಸಂಪರ್ಕ ಹೊಂದಿರುವುದರಿಂದ ಗ್ರಾಹಕರು ಕೊಡುವ ಬೆಲೆಯ ಬಹು ದೊಡ್ಡ ಭಾಗವನ್ನು ಅಲ್ಲಿಯ ರೈತರು ಪಡೆಯುತ್ತಾರೆ. ಆದಾಗ್ಯೂ ಅವರು ವ್ಯವಸಾಯವನ್ನು ಬಿಟ್ಟು ಹೋಗುತ್ತಿದ್ದಾರೆ. ಮಾರುಕಟ್ಟೆಯು ಆ ರೈತರ ಪರವಾಗಿಯೇ ಇರುವಾಗ ಮತ್ತು ಖಾಸಗೀ ಕ್ಷೇತ್ರದ ವ್ಯಾಪರವೂ ರೈತರಿಗೆ ಹೆಚ್ಚಿನ ಆದಾಯವನ್ನು ತಂದುಕೊಡುತ್ತಿರುವಾಗ ರೈತರು ವ್ಯವಸಾಯವನ್ನು ತ್ಯಜಿಸುವುದು ಹೇಗೆ ಸಾಧ್ಯ? ಅಭಿವೃದ್ಧಿ ಹೊಂದಿದ ದೇಶಗಳಲ್ಲಿರುವ ಕುಟುಂಬಾಧಾರಿತ ವ್ಯವಸಾಯ ಬಿದ್ದು ಹೋಗುತ್ತಿರುವುದಕ್ಕೆ ಏನಾದರೂ ಕಾರಣವಿರಲೇಬೇಕು. ಶ್ರೀಮಂತ ದೇಶಗಳಲ್ಲಿಯ ವಾಸ್ತವ ಸಂಗತಿಗಳು ನಾವು ತಿಳಿದಿರುವುದಕ್ಕಿಂತ ಭಿನ್ನವಾಗಿರಬಹುದು ಅಥವಾ ಮಾರುಕಟ್ಟೆಯ ಹಾಗೂ ವ್ಯವಸಾಯದ ಅರ್ಥಶಾಸ್ತ್ರವನ್ನು ಅರಿತುಕೊಳ್ಳವಲ್ಲಿ ನಾವು ಬಹುದೊಡ್ಡ ತಪ್ಪು ಮಾಡಿರಬಹುದು.

ಪರಿಸ್ಥಿತಿಯನ್ನು ಇನ್ನೂ ಹೆಚ್ಚು ಹದಗೆಡಿಸುತ್ತಿರುವ ಸಂಗತಿ ಏನೆಂದರೆ ಆ ಶ್ರೀಮಂತ ದೇಶಗಳಲ್ಲಿಯ ವ್ಯವಸಾಯದ ಮಾದರಿಯನ್ನೇ ಭಾರತದ ರೈತರಿಗೂ ಸೂಚಿಸಲಾಗುತ್ತಿದೆ. ಶ್ರೀಮಂತ ದೇಶಗಳಲ್ಲಿಯ ವ್ಯವಸಾಯ ಪದ್ಧತಿಯನ್ನು ಅನುಸರಿಸದಿದ್ದರೆ ಎರಡನೆ ಹಸಿರುಕ್ರಾಂತಿಯನ್ನು ಸಾಧಿಸಲಾಗುವುದಿಲ್ಲವೆಂಬ ಮಾತನ್ನು ಪದೇ ಪದೇ ಭಾರತೀಯ ರೈತರಿಗೆ ಹೇಳುವುದರಲ್ಲಿ ನೀತಿ ನಿರ್ಧಾರಕರು ಮತ್ತು ಕೃಷಿಯಾಧಾರಿತ ವ್ಯಾಪಾರ ಕಂಪನಿಗಳು ದಣಿಯುವುದೇ ಇಲ್ಲ.

ಆದರೆ ವ್ಯವಸಾಯದ ಆ ಮಾದರಿ ಅಮೇರಿಕಾದಲ್ಲಿ ಕಾರ್ಯಸಾಧುವಾಗುತ್ತಿಲ್ಲವೆಂಬವಿಚಾರವನ್ನು ನಮಗೇಕೆ ಹೇಳುತ್ತಿಲ್ಲ? ಹಿಂದೆಂದೂ ಕಂಡಿರದಂಥ ಸಂಖ್ಯೆಯಲ್ಲಿ ಅಲ್ಲಿನ ರೈತರು ವ್ಯವಸಾಯವನ್ನು

ತ್ಯಜಿಸುತ್ತಿದ್ದಾರೆ. ವ್ಯವಸಾಯಾಧಾರಿತ ವ್ಯಾಪಾರಿ ಕಾರ್ಪೊರೇಷನ್‌ಗಳ ಕೈಗೆ ಕೃಷಿ ಜಾರಿದೆ. ಉದಾಹರಣೆಗೆ ಯೂರೋಪನ್ನೆ ತೆಗೆದುಕೊಳ್ಳಿ. ವ್ಯವಸಾಯಕ್ಕೆ ಸಂಬಂಧಿಸಿದ ಪ್ರತಿಯೊಂದು ಚಟುವಟಿಕೆಗೂ ಅಲ್ಲಿ ರೈತರಿಗೆ ಸಬ್ಸಿಡಿ ಸಿಗುತ್ತದೆಯಲ್ಲದೆ ರೈತರಿಗೆ ಸುಲಭವಾಗಿ ಸಾಲ ಸಿಗುತ್ತದೆ ಹಾಗೂ ವಿಮೆಯ ಅವಕಾಶವೂ ಇದೆ. ಭಾರತದಲ್ಲಿರುವಂತೆ ಅಲ್ಲಿ ಕೃಷಿ ಮಂಡಿಗಳಿಲ್ಲ. ಅಂದರೆ ರೈತರು ಖಾಸಗೀ ಪೇಟೆಗಳೊಂದಿಗೆ ನೇರ ಸಂಬಂಧ ಹೊಂದಿದ್ದಾರೆ. ಆದಾಗ್ಯೂ ಅಮೆರಿಕೆಯಲ್ಲಿ ರೈತರು ನಿಮಿಷಕ್ಕೊಬ್ಬರಂತೆ ವ್ಯವಸಾಯವನ್ನು ತೊರೆಯುತ್ತಿದ್ದಾರೆ. ಈಗ ಅಲ್ಲಿ ಕೇವಲ ೭ಲಕ್ಷ ರೈತರು ಮಾತ್ರ ಉಳಿದಿದ್ದಾರೆ. ಇದಕ್ಕೆ ಕಾರಣ ಅಲ್ಲಿಯ ವ್ಯವಸಾಯದ ನೀತಿ. ಅಮೆರಿಕಾದಲ್ಲಿ ರೈತರು ವ್ಯವಸಾಯ ಕ್ಷೇತ್ರದಿಂದ ಹೊರದಬ್ಬಲ್ಪಡುತ್ತಿದ್ದಾರೆ. ಅಲ್ಲಿಯ ೨೦೦೦ಇಸವಿಯ ಸಮೀಕ್ಷೆಯ ಪ್ರಕಾರ ಅಮೆರಿಕಾ ತನ್ನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ರೈತರ ಎಣಿಕೆಯನ್ನೇ ಮಾಡಲಿಲ್ಲ ಅದರ ಅಗತ್ಯವೂ ಇರಲಿಲ್ಲ. ಏಕೆಂದರೆ ರೈತರ ಸಂಖ್ಯೆ ಅತ್ಯಂತ ಕನಿಷ್ಠಕ್ಕೆ ಇಳಿದಿತ್ತು. ಆದ್ದರಿಂದ ಅಮೆರಿಕಾ ವ್ಯವಸಾಯದ ಬಗ್ಗೆ ಮಾತನಾಡುವುದೆಂದರೆ ಕಾರ್ಪೊರೇಷನ್ನುಗಳ ಬಗ್ಗೆ ಮತ್ತು ಯಂತ್ರಗಳ ಬಗ್ಗೆಯೇ. ಕೈಗಾರಿಕೃತ ವ್ಯವಸಾಯ ಪದ್ಧತಿಗಳು ಮತ್ತು ಸೂಪರ್‌ಮಾರ್ಕೆಟ್ಟುಗಳ ಜೊತೆಗಿನ ಸಂಬಂಧದ ನಂತರವೂ ಅಮೆರಿಕೆಯಲ್ಲಿ ಮಧ್ಯವರ್ತಿಗಳ ಸಂಖ್ಯೆ ಹೆಚ್ಚಾಗಿಯೇ ಇದೆ. ರೈತರು ಅತ್ಯಂತ ಕಡಿಮೆಬೆಲೆಗೆ ಉತ್ಪನ್ನವನ್ನು ಮಾರಬೇಕಾಗಿದೆ ಎಂಬುದನ್ನು ಅರಿತ ಅಲ್ಲಿಯ ಸರ್ಕಾರವು ರೈತರಿಗೆ ನೇರವಾಗಿ ಬೆಂಬಲ ಬೆಲೆಯನ್ನು ಕೊಡುತ್ತಿದೆ. ಪ್ರತಿಯೊಬ್ಬ ರೈತ ಒಂದು ವರ್ಷದಲ್ಲಿ ೩೩ಸಾವಿರ ಡಾಲರ್ ಹಣವನ್ನು ಬೆಂಬಲ ಬೆಲೆಯಾಗಿ ಪಡೆಯುತ್ತಾನೆ. ಕೆನಡಾದಲ್ಲಿ ಸುಮಾರು ೭೦ವ್ಯವಸಾಯ ಉತ್ಪನ್ನ ಮಾರಾಟದ ಕಂಪನಿಗಳು ಅತ್ಯಂತ ಲಾಭವನ್ನು ಮಾಡಿಕೊಳ್ಳುತ್ತಿವೆ. ಆದರೆ ರೈತರು ಮಾತ್ರ ಹಾನಿಗೊಳಗಾಗುತ್ತಿದ್ದಾರೆ. ಶ್ರೀಮಂತ ದೇಶಗಳಲ್ಲಿಯ ರೈತರು ಕಡ್ಡಾಯವಾಗಿ ಸರ್ಕಾರದ ಸಹಾಯದ ಮೇಲೆಯೇ ಜೀವಿಸುತ್ತಿದ್ದಾರೆ.

ಈಗ ಅಂಥ ದುರ್ದೆಶೆ ಭಾರತದಲ್ಲಿಯ ೬೦ಕೋಟಿ ರೈತರಿಗೆ ಬಂದಿದೆ. ಶ್ರೀಮಂತ ಮತ್ತು ಕೈಗಾರಿಕೃತಗೊಂಡ ದೇಶಗಳಲ್ಲಿಯ ರೈತರಂತೆಯೇ ತುಳಿತಕ್ಕೆ ಒಳಗಾಗುವ ಸರತಿ ಭಾರತೀಯ ರೈತರದ್ದಾಗಿದೆ.

– *ದೇವಿಂದರ್ ಶರ್ಮ*

ಕಾಮಧೇನು ರಾಷ್ಟ್ರೀಯ ಪ್ರಾಣಿಯೆಂದು ಮಾನ್ಯವಾಗಲಿ

-ಸುರೇಂದ್ರ ಕೌಲಗಿ

ಗಾವೋ ರಕ್ಷಂತಿ ರಕ್ಷಿತಾಃ- ಗೋವನ್ನು ರಕ್ಷಿಸಿದವರನ್ನು ಗೋವು ರಕ್ಷಿಸುತ್ತದೆ.

ಜಾಗತೀಕರಣ ಮತ್ತು ಕೈಗಾರಿಕರಣ ಮತ್ತು ನಗರಿಕರಣಗಳ ಕಾರಣದಿಂದಾಗಿ ರಾಷ್ಟ್ರದ ಏಳು ಲಕ್ಷ ಹಳ್ಳಿಗಳ ಸಮಾಧಿಯಾಗುತ್ತಿದೆ; ಆ ಹಳ್ಳಿಯಲ್ಲಿ ವಾಸಿಸುತ್ತಿರುವ ಸುಮಾರು ಎಪ್ಪತ್ತು ಕೋಟಿ ಜನರ ಸಜೀವ ನರಕಯಾತನೆ ಪ್ರಾರಂಭವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳ ನಂತರವೂ, ಗಣರಾಜ್ಯವಾಗಿ ಐವತ್ತೇಳು ವರ್ಷಗಳ ನಂತರವೂ ರಾಷ್ಟ್ರದ ನಿರ್ಮಾಣವೆಂದರೆ ನಗರಗಳ ನಿರ್ಮಾಣ; ಸಣ್ಣ ಹಾಗೂ ವಿಕೇಂದ್ರೀಕೃತ ಉದ್ಯೋಗಗಳ ಬದಲಾಗಿ ಬೃಹತ್ ಕೈಗಾರಿಕೆಗಳ ಸ್ಥಾಪನೆ; ಭಾರತೀಯ ಸಂಸ್ಕೃತಿಯನ್ನು ಪೋಷಿಸುವ ಬದಲಾಗಿ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ, ಪೋಷಣೆ; ಭಾರತೀಯ ಪರಿಸ್ಥಿತಿ ಆಧಾರಿತ ಆರ್ಥಿಕ ನೀತಿಯ ಬದಲಾಗಿ, ವಿದೇಶಗಳಲ್ಲಿಯ ಆರ್ಥಿಕ ನೀತಿಯ ಅಂಧಾನುಕರಣೆ, ಭಾರತೀಯ ಹಾಗೂ ಮಾತೃಭಾಷೆಗಳ ಕೊಲೆ ಮಾಡಿ ಇಂಗ್ಲಿಷ್ ಭಾಷೆಗೆ ಪಟ್ಟ ಕಟ್ಟುವುದು ಎಂದು ವ್ಯಾಖ್ಯಾನಿಸಲಾಗುತ್ತಿರುವುದು ಭಾರತಕ್ಕೆ ಇಪ್ಪತ್ತೊಂದನೇ ಶತಮಾನದ ಶಾಪವಾಗಿದೆ.

ಅಭಿವೃದ್ಧಿಯ ಹೆಸರಿನಲ್ಲಿ ಚಂದ್ರಯಾನ ಪ್ರಮುಖವಾದ ಕಾರ್ಯಕ್ರಮವಾಗಿದೆಯೇ ಹೊರತು, ಭೂಮಿಯ ಮೇಲಿನ ವಾಸ್ತವ ಮತ್ತು ನಗ್ನ ಸಂಗತಿಗಳು ನಗಣ್ಯವಾಗಿವೆ. ಅನ್ಯಾಯದ ಹಣ, ನೆಮ್ಮದಿಯ ಹೆಣ ಎಂಬುದಕ್ಕೆ ಇಂದಿನ ಯೂರೋಪಿನ ಚರಿತ್ರೆ ಪ್ರತ್ಯಕ್ಷ ದೃಷ್ಟಾಂತವಾಗಿದೆ. ವಿಜ್ಞಾನ ಈಗ ವಾಸ್ತವವಾಗಿ ಮೋಹಿನಿಯಾಗಿರದೆ ಭಸ್ಮಾಸುರನಾಗಿದೆ ಎಂಬ ಅರಿವಿನ ಮೊನಚು ನಮ್ಮ ಜನಸಮುದಾಯಕ್ಕೆ ಬಲವಾಗಿ ಇನ್ನೂ ಚುಚ್ಚುತ್ತಿಲ್ಲ; ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಕೃತಿಯ ವಿರುದ್ಧವಾಗಿ ಕಾರ್ಯೋನ್ಮತ್ತವಾಗಿವೆ ಎಂಬ ಅರಿವಿನ ಶಾಖ ಚುರುಕು ಮುಟ್ಟಿಸುತ್ತಿಲ್ಲ. ನಮ್ಮ ದೇಶದ ರಾಜಕಾರಿಣಿಗಳಿಗೆ ತಾವು ಎಂಥ ಭಯಾನಕ ಭವಿಷ್ಯತ್ತಿನ ನಿರ್ಮಾಣಕ್ಕೆ ಕಾರಣವಾಗುವ ನೀತಿ-ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದೇವೆಂಬ ಪರಿವೆಯೇ ಇಲ್ಲವಾಗಿದೆ; ಅರ್ಥಶಾಸ್ತ್ರಜ್ಞರಂತೂ ಅಭಿವೃದ್ಧಿಯ ಹೆಸರಿನಲ್ಲಿ ದೇಶದ ದಿಕ್ಕನ್ನು ತಪ್ಪಿಸುತ್ತಿದ್ದಾರೆ; ಅಭಿವೃದ್ಧಿಯೋಜಕರು ತಪ್ಪು ಮೌಲ್ಯಗಳ ಮೇಲೆ ಸಮಾಜ ಜೀವನದ ಸೌಧ ನಿರ್ಮಿಸ ಹೊರಟಿದ್ದಾರೆ. ಇವೆಲ್ಲವುಗಳ ಪರಿಣಾಮವಾಗಿ ರಾಷ್ಟ್ರ ಜೀವನ ನೆಮ್ಮದಿಯ ಬದುಕಿಗಾಗಿ ತಲ್ಲಣಿಸುತ್ತಿದೆ. ಇಪ್ಪತ್ತೊಂದನೇ ಶತಮಾನ ಮಾನವಕುಲದ ವಿನಾಶದ ಜಾತಕ ಬರೆಯಲು ಹೊರಟಿದೆ.

ಮುಂದಿನ ಶತಮಾನಗಳಲ್ಲಿ ಧರ್ಮಕ್ಷೇತ್ರದಲ್ಲಿ ಮಾತ್ರವಲ್ಲ ಮಾನವ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಗ್ಲಾನಿಯುಂಟಾಗುವ ಮುನ್ಸೂಚನೆಗಳು ಸೂರ್ಯನ ಬೆಳಕಿನಷ್ಟೇ ಸ್ಪಷ್ಟವಾಗಿ ಗೋಚರಿಸುತ್ತಿವೆ. ೧೯೦೮ರಲ್ಲಿ, ಅಂದರೆ ೯೪ವರ್ಷಗಳ ಹಿಂದೆ ಈಗಿನಷ್ಟು 'ಅಭಿವೃದ್ಧಿ'ಯನ್ನು ಜಗತ್ತು, ಮುಖ್ಯವಾಗಿ ಭಾರತ ಸಾಧಿಸದೇ ಇದ್ದಾಗ ಗಾಂಧೀಜಿ ಹಿಂದ್ ಸ್ವರಾಜ್ ಪುಸ್ತಕವನ್ನು ಸಮುದ್ರದಲ್ಲಿ ಹೊಯ್ದಾಡುತ್ತಾ ಚಲಿಸುವ ಹಡಗಿನಲ್ಲಿ ಬರೆದಾದ ಮೇಲೆ ಅದರಲ್ಲಿಯ ಒಂದು ಶಬ್ದವನ್ನೂ ಬದಲಿಸುವುದಿಲ್ಲ ಎಂದು ಹೇಳಿದರು. ಆ ಪುಸ್ತಕದಲ್ಲಿಯ ಗಾಂಧೀಜಿಯವರ ಅಭಿಪ್ರಾಯಗಳು ಇಂದಿನ ದುರಂತಗಳ ಸಾಧ್ಯತೆಯನ್ನು ಕುರಿತೇ ಅವರ ದೂರದರ್ಶಿತ್ವದ ಚಿಂತನೆಯೇ ಆಗಿವೆ. ಈಗ ೨೦೦೭ರಲ್ಲಿ ಆ ದುರಂತಗಳ ಸಂಖ್ಯೆ ಹೆಚ್ಚುತ್ತಿವೆ. ಹೆಚ್ಚುತ್ತಿರುವ ಈ ದುರಂತಗಳು ಪ್ರಚಲಿತ ಮಾನವಕುಲದ ಜೀವನವನ್ನು ಎಷ್ಟೊಂದು ಹಿಂಡುತ್ತಿವೆಯೆಂದರೆ ಜಗತ್ತಿನಾದ್ಯಂತ ಜಾಗತೀಕರಣದ ವಿರುದ್ಧ ಹೋರಾಟಗಳು ಪ್ರಾರಂಭವಾಗಿವೆ. ಹಿಂದುಳಿದ ಆಫ್ರಿಕಾ ದೇಶಗಳಲ್ಲಷ್ಟೇ ಅಲ್ಲ, ಮುಂದುವರೆದ ದೇಶಗಳಲ್ಲೂ ಸಹ ಅನೇಕ ಪ್ರಕಾರದ ಈ 'ಕರಣೀಗಳ' ವಿರುದ್ಧ ಹೋರಾಟಗಳು ಪ್ರಾರಂಭವಾಗಿವೆ. ಮೊದಮೊದಲು ಜಾಗತೀಕರಣವನ್ನು ಸ್ವಾಗತಿಸುತ್ತಿದ್ದ ಸಾಮಾನ್ಯ ಜನರು, ರೈತರು, ಕಾರ್ಮಿಕರು, ನಗರವಾಸಿಗಳು, ಗಿರಿಜನರು ಮುಂತಾಗಿ ಎಲ್ಲರೂ ಇತ್ತೀಚಿಗಿನ ದಿನಗಳಲ್ಲಿ ಅದನ್ನು ವಿರೋಧಿಸುತ್ತಿದ್ದಾರೆ. ಮನೆಯಲ್ಲಿ ಹೊಕ್ಕ ವಿಷದ ಹಾವಿನಂತೆ ಅದನ್ನು ಭಾವಿಸುತ್ತಿದ್ದಾರೆ. ಅಷ್ಟೇ ಅಲ್ಲ ಇತ್ತೀಚೆಗೆ ನಡೆಯುವ ಅಂತರಾಷ್ಟ್ರೀಯ ಸಂಘಟನೆಗಳ ವಿಚಾರಗೋಷ್ಠಿಗಳಲ್ಲಿ ನವ ಅಭಿವೃದ್ಧಿ ನೀತಿಗಳು ಹೇಗೆ ತಮ್ಮ-ತಮ್ಮ ದೇಶಗಳಲ್ಲಿ ಆರೋಗ್ಯ, ಪರಿಸರ ಮತ್ತು ಜನಾಂಗೀಯ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಉಂಟು ಮಾಡಿವೆ ಎಂಬುದನ್ನು ಏರಿದ ಧ್ವನಿಗಳಲ್ಲಿ ಚರ್ಚಿಸಲಾಗುತ್ತಿದೆ. ಅಮೇರಿಕಾದ ಸಾರ್ವಭೌಮೀಕರಣವನ್ನು ಬಲವಾಗಿ ಖಂಡಿಸಲಾಗುತ್ತಿದೆ. ಜಾಗತೀಕರಣ ಮತ್ತು ಇತರ ಪ್ರಕಾರದ 'ಕರಣ'ಗಳಿಂದ ಜಗತ್ತು ಒಂದು ಗ್ರಾಮವಾಗಿ ರೂಪಗೊಳ್ಳುತ್ತಿದೆ ಎಂದು ಹೇಳುತ್ತಿರುವಾಗ ಪಶ್ಚಿಮ ಭೂಖಂಡದ ದೇಶಗಳು ಪೌರ್ವಾತ್ಯ ದೇಶಗಳ ಆರ್ಥಿಕ ವ್ಯವಸ್ಥೆ, ಸಾಮಾಜಿಕ-ಸಾಂಸ್ಕೃತಿಕ ಗುಣ ವಿಶೇಷಗಳು, ಧಾರ್ಮಿಕ ಭಾವನೆಗಳು ಇತ್ಯಾದಿಗಳನ್ನು ಅರಿತುಕೊಳ್ಳಲು ವಿಫಲವಾಗಿದೆಯಲ್ಲದೆ, ಅದನ್ನು ಕೀಳಾಗಿಯೂ ಕಾಣುತ್ತಿವೆ. ಜಗತ್ತು ಒಂದು ಗ್ರಾಮವೆಂಬ ವಿಚಾರ ಶೋಷಣೆಗೆ ಕಾರಣವಾಗುತ್ತಿದೆ. ಹಿಂದಿನ ಕಾಲದಲ್ಲಿ ಭಾರತೀಯ ಗ್ರಾಮಗಳು ಜಾತಿ ಆಧಾರಿತವಾಗಿ ವಿಂಗಡಗೊಂಡಿದ್ದಂತೆ ಇಂದು ಜಗತ್ತೆಂಬ ಒಂದು ಗ್ರಾಮವು ಅರ್ಥ, ವರ್ಣ, ಭಾಷೆ, ಧರ್ಮ, ಬಡವ, ಬಲ್ಲಿದ, ಸರ್ವಾಧಿಕಾರತ್ವ, ಪ್ರಜಾಪ್ರಭುತ್ವ, ಮುಂದುವರೆದ, ಮುಂದುವರೆಯುತ್ತಿರುವ, ಹಿಂದುಳಿದ ಮುಂತಾದ ಹಲವಾರು ಬಗೆಯಲ್ಲಿ ವಿಂಗಡಣೆಗೊಂಡಿದೆ. ಒಂದು ಇನ್ನೊಂದಕ್ಕೆ ಪೂರಕವಾಗಿರದೆ ಅವು ವಿರೋಧಾತ್ಮಕವಾಗಿ ಕೆಲಸ ಮಾಡುತ್ತಿವೆ.

ಜಗತ್ತು ಒಂದು ಗ್ರಾಮ ಎಂಬ ವಿಚಾರಕ್ಕೆ ಮೂಲಭೂತವಾಗಿ, ಆಧಾರರೂಪವಾಗಿ ಇರಬೇಕಾದ ಮಾನವೀಯತೆಯ ಗುಣಗಳೇ ಇಲ್ಲವಾಗಿವೆ. ಇಲ್ಲಿ ವಿಚಾರ ಮಾಡಬೇಕಾದ ಮುಖ್ಯ ಸಂಗತಿಯೇನೆಂದರೆ ಭೌತಿಕ ಪ್ರಗತಿಗೆ ಅಥವಾ ಅಭಿವೃದ್ಧಿಗೆ ಕಾರಣವಾಗುವ ವೈಜ್ಞಾನಿಕ, ತಾಂತ್ರಿಕ, ವೈದ್ಯಕೀಯ ಕ್ಷೇತ್ರಗಳಲ್ಲಿಯ ಸಂಶೋಧನೆಗಳಾಗಲೀ ಶಸ್ತ್ರಾಸ್ತ್ರಗಳ ಉತ್ಪಾದನೆಯಾಗಲೀ ಗ್ರಾಮ-ಜಗತ್ತಿಗೆ ಬೇಕಾದ ಮೌಲ್ಯಗಳನ್ನುಸಮಾಜ ಜೀವನದಲ್ಲಿ ಸ್ಥಾಪಿಸಲಾರವು. ಆದರೆ ದುರ್ದೈವದ ಸಂಗತಿಯೇನೆಂದರೆ ಆಧುನಿಕತೆ ಎಂಬ ಕಲ್ಪನಾವಿಲಾಸ ಮಾನವನ ಚಿಂತನಾ ಕ್ರಮವನ್ನೇ ದಾರಿತಪ್ಪಿಸಿದೆ, ವಿಕೃತಗೊಳಿಸಿದೆ. ಉದಾಹರಣೆಗೆ ಭಾರತೀಯ ಸಂಸ್ಕೃತಿಯನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಮತ್ತು ಈ ಮಾತು ಸಾರ್ವತ್ರಿಕವಾಗಿರಬೇಕಾದುದು ಉಚಿತವಾಗಿ ಇರುವುದರಿಂದ ಅದನ್ನು ಹೇಳಬಹುದು. ಆ ಸಂಸ್ಕೃತಿಯ ಪ್ರಕಾರ, ತಾಯಿ-ತಂದೆ-ಗುರು-ಅತಿಥಿ ಇವರು ದೇವರ ಸಮಾನ ಇದು ಆರ್ಷೇಯ ಮಾತು. ಆದರೆ ಆಧುನಿಕ ಮಂತ್ರಗನುಗುಣವಾಗಿ ಈ ಮೂವರು ಪೀಡೆ! ಇವರು ಎಷ್ಟು ಬೇಗ ತೊಲಗುತ್ತಾರೋ ಅಷ್ಟು ಹಿತಕರ. ಹಾಗೆಯೇ ಶರೀರ ಶ್ರಮವಿಲ್ಲದ ಕೂಳು, ಕಳ್ಳತನದ ಕೂಳು ಎಂದು ಧರ್ಮಗ್ರಂಥಗಳೆಲ್ಲಾ ಹೇಳಿವೆ. ಆದರೆ ಹೊಸ ತಾಂತ್ರಿಕ ಧರ್ಮದಲ್ಲಿ ಶರೀರ ಧರ್ಮವೊಂದು ಪಾಪ, ಅಷ್ಟೇ ಅಲ್ಲ ಶರೀರವೊಂದು ವ್ಯಾಪಾರೀ ಪದಾರ್ಥ. ಮಾನವನ ದೇಹ ವಾಣಿಜ್ಯ ವಸ್ತುವಾದರೆ, ಸಾಕು ಪ್ರಾಣಿಗಳು ಹೊಟ್ಟೆಗೆ ಆಹಾರ. ಇಂಥ ಸಾಕು ಪ್ರಾಣಿಗಳಲ್ಲಿ ಮನುಷ್ಯನ ಸಂಸ್ಕೃತಿಯೊಂದಿಗೆ ಬೆಳೆದುಕೊಂಡು ಬಂದಿರುವ ಗೋವು ಸಹ ಸೇರಿದೆ. ಅರಬ್ಬರ ಒಂಟೆಯೂ ಸೇರಿದೆ. ಇಂದಿನ ತಲೆಕೆಳಗಾದ ಜೀವನ ವ್ಯವಸ್ಥೆಯಲ್ಲಿ ಗೋವು ಮತ್ತು ಒಂಟೆಯಂಥ ಪರೋಪಕಾರಿ ಪ್ರಾಣಿಗಳನ್ನು ಮಾಂಸಕ್ಕಾಗಿ, ಚರ್ಮಕ್ಕಾಗಿ ಕೊಲೆಮಾಡಲಾಗುತ್ತಿದೆ. ಇತ್ತೀಚೆಗೆ ತಮಿಳುನಾಡಿನಲ್ಲಿ ಈದ್ ಹಬ್ಬದಂದು ನೂರಾಐವತ್ತು ಒಂಟೆಗಳನ್ನು ಕೊಲ್ಲಲಾಯಿತು, ಗೋವುಗಳನ್ನಂತೂ ಅಹರ್ನಿಶಿ ವರ್ಷವಿಡೀ ದೇಶದಲ್ಲಿರುವ ಸುಮಾರು ಇನ್ನೂರಕ್ಕೂ ಹೆಚ್ಚಿರುವ ಕಸಾಯಿಖಾನೆಗಳಲ್ಲಿ ಕೊಲ್ಲಲಾಗುತ್ತಿದೆ. ಗೋವುಗಳನ್ನು ಕಸಾಯಿಖಾನೆಗೆ ಕರೆದುಕೊಂಡು ಹೋಗುವ ಮೊದಲು ಅವುಗಳಿಗೆ ಕೊಡಲಾಗುವ ಹಿಂಸೆ ಹೃದಯ ವಿದ್ರಾವಕವಾಗಿರುತ್ತದೆ. ಈ ಹಿಂಸೆ ಎಷ್ಟು ಅಮಾನುಷವಾಗಿರುತ್ತದೆಂಬ ವಿಷಯವನ್ನು ಗಾಂಧೀ ಸ್ವತಃ ತಮ್ಮ ೧೯-೬-೧೯೩೦ರ ಹರಿಜನ ಪತ್ರಿಕೆಯಲ್ಲಿ ಉಲ್ಲೇಖಿಸಿದ್ದಾರೆ. ಇಂದಿಗೆ ಅರವತ್ತೊಂಭತ್ತು ವರ್ಷಗಳು ಕಳೆದರೂ ಸಾಕುಪ್ರಾಣಿಳ ಕಸಾಯಿಖಾನೆಗಳಲ್ಲಿಯ ಹಿಂಸೆ ತಪ್ಪಿಲ್ಲ. ಗಾಂಧೀಜಿಯವರ ೧೯೨೮ರಲ್ಲಿಯ ಯಂಗ್ ಇಂಡಿಯಾದ ಪ್ರಕಾರ ಮುಂಬೈಯ ಬಾಂದ್ರಾ ಕಸಾಯಿಖಾನೆಯಲ್ಲಿ ಕೊಲ್ಲಲಾದ ಎಮ್ಮೆಗಳ ಸಂಖ್ಯೆ ಎಂಟು ವರ್ಷಗಳಲ್ಲಿ ೨೦,೦೦೦ ಅದೇ ತಾನೆ ಹುಟ್ಟಿದ ಕರುಗಳ ಹತ್ಯೆಯ ಸಂಖ್ಯೆ ೧೯,೦೦೦ ಅಂದಿನಿಂದ ಹಾಲು ಕೊಡುವ ಪ್ರಾಣಿಗಳ ಹತ್ಯೆ ಅವ್ಯಾಹತವಾಗಿ ನಡೆದೇಯಿದೆ. ಸಂಪತ್ತನ್ನು ಹೊಂದಿರುವ

ವಿಷಯದಲ್ಲಿ ಭಾರತ ವಿಶ್ವದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಆದರೆ ಸರ್ಕಾರದ ಗೋಹತ್ಯಾ ನಿಷೇಧದ ನಂತರವೂ ದೇಶದ ಎಲ್ಲ ಕಸಾಯಿಖಾನೆಗಳಲ್ಲಿ ಗೋವುಗಳ ಮಾರಣ ಹೋಮ ನಿರಂತರ ನಡೆಯುತ್ತಿದೆ. ಇದರಿಂದಾಗಿ ದೇಶದ ಹಳ್ಳಿಗಳಲ್ಲಿ ದನಗಳೇ ಕಾಣುತ್ತಿಲ್ಲ. ದೇಶೀಯ ತಳಿಗಳೆಲ್ಲವೂ ನಿರ್ನಾಮವಾಗುತ್ತಿವೆ.

ದನಗಳು ಶಕ್ತಿಯ ಮತ್ತು ಇಂಧನದ ದೊಡ್ಡ ಭಂಡಾರವೆಂಬ ಮಾತನ್ನೇ ನಮ್ಮ ದೇಶದ ಅಭಿವೃದ್ಧಿಯೋಜಕರು ಮರೆತಿದ್ದಾರೆ. ಸುಲಭವಾಗಿ ಮತ್ತು ಪ್ರಕೃತಿ ಸಹಜವಾಗಿ ಮತ್ತು ಪಾರಂಪರಿಕವಾಗಿ ಬಂದಿರುವ ಪಶುಶಕ್ತಿಯನ್ನು ವ್ಯವಸ್ಥಿತವಾಗಿ ನಾಶಮಾಡುತ್ತಾ, ಹೊಸ ಇಂಧನದ ಮೂಲಗಳನ್ನು ಕಂಡು ಹಿಡಿಯುವಲ್ಲಿ, ಸ್ಥಾಪಿಸುವಲ್ಲಿ ಸರ್ಕಾರ ಕೋಟಿ ಲೆಕ್ಕದಲ್ಲಿ ಹಣವನ್ನು ಸುರಿಯುತ್ತಿದೆ. ಇದಕ್ಕಿಂತ ಮೂರ್ಖತನದ ಯೋಜನೆ ಮತ್ತೊಂದು ಇರಲಾರದು. ನಮ್ಮ ದೇಶದಲ್ಲಿಯ ನೂರಾರು ಕೃಷಿ ವಿಶ್ವವಿದ್ಯಾಲಯಗಳಲ್ಲಿಯ ವಿಜ್ಞಾನಿಗಳು ದೇಶದಲ್ಲಿರುವ ಅಪಾರ ಗೋಸಂಪತ್ತನ್ನು ದೇಶದ ಅಭಿವೃದ್ಧಿಗಾಗಿ ಉಪಯೋಗಿಸುವ ವಿಷಯದಲ್ಲಿ ತಮ್ಮ ನಿಜವಾದ ಪಾತ್ರವನ್ನು, ಹೊಣೆಗಾರಿಕೆಯನ್ನು ಮರೆತಿದ್ದಾರೆ. ನಮ್ಮ ದೇಶದ ಸಂವಿಧಾನದ ೫೧-ಎ (ಜಿ) ಪರಿಚ್ಛೇದ ಗೋಹತ್ಯೆ / ಪ್ರಾಣಿಹತ್ಯೆಗಳ ನಿಷೇಧವನ್ನು ನಿರ್ದೇಶಿಸುತ್ತದೆ. ಆದರೆ ಯಾವ ರಾಜ್ಯ ಸರ್ಕಾರವೂ ಈ ವಿಧಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ತೋರಿಕೆಗೆ ಕಾನೂನುಗಳಿವೆ. ಅವುಗಳ ಪಾಲನೆಗಿಂತ ಅವುಗಳ ಖಂಡನೆಯೇ ನಿರಾತಂಕವಾಗಿ ನಡೆಯುತ್ತಿದೆ.

ಗೋವಿನ ರಕ್ಷಣೆ, ಅದರ ಉಪಯೋಗದ ವಿಷಯಕ್ಕೂ ಯಾವುದೇ ಒಂದು ಧರ್ಮದ, ಯಾವುದೇ ಒಂದು ಸಂಘಟನೆಯ ಅಥವಾ ಯಾವುದೇ ಒಂದು ವ್ಯಕ್ತಿಯ ಸಂಬಂಧವಿಲ್ಲ. ಗೋರಕ್ಷಣೆ ಮತ್ತು ಉಪಯೋಗ ಮಾನವಕುಲಕ್ಕೆ, ಅದರಲ್ಲಿಯೂ ಭಾರತಕ್ಕೆ ಮಹತ್ವದ ಸಾಮಾಜಿಕ, ಆರ್ಥಿಕ ವಿಷಯವಾಗಿದೆ. ಈ ವಿಷಯದಲ್ಲಿ ಭಾರತ ತನ್ನತನವನ್ನು ಗುರುತಿಸಿಕೊಳ್ಳಬೇಕಿದೆ. ಅಮೇರಿಕಾ, ಚೀನಾ, ಇಸ್ಲಾಂ ದೇಶಗಳು ದನ ಸಂಪತ್ತನ್ನು ಹೇಗೆ ಉಪಯೋಗಿಸುತ್ತವೆ ಎನ್ನುವುದಕ್ಕೆ ಭಾರತೀಯರು ಮಹತ್ವವನ್ನು ಕೊಡಬೇಕಾಗಿಲ್ಲ, ಮನ್ನಣೆಯನ್ನು ಕೊಡಬೇಕಾಗಿಲ್ಲ. ಜಗತ್ತಿನ ಇತರೆ ದೇಶಗಳು ಎಷ್ಟೇ ಕೈಗಾರೀಕರಣಗೊಳ್ಳಲಿ. ಭಾರತ ತನ್ನ ಮಟ್ಟಿಗೆ ಕೃಷಿ ಪ್ರಧಾನವಾಗಿದ್ದುಕೊಂಡೇ ಕೈಗಾರೀಕರಣವನ್ನು ಸಾಧಿಸಲು ಪ್ರಯತ್ನಿಸಲಿ. ಕೃಷಿಯನ್ನು ಹಾಳು ಮಾಡಿ, ಹಳ್ಳಿಗಳನ್ನು ಹಾಳು ಮಾಡಿ ಚಂದ್ರಯಾನ ಮಾಡುವುದು ಮೂರ್ಖತನವೆಂಬ ಸಂಗತಿಯನ್ನು ನಮ್ಮ ದೇಶದ ವಿಜ್ಞಾನಿಗಳು ತುರ್ತಾಗಿ ತಿಳಿಯಲಿ. ಬೆಚ್ಚಗಿನ ರಾಷ್ಟ್ರಪತಿ ಭವನದಲ್ಲಿ ಕುಳಿತಿರುವವರು ತಿಳಿಯಲಿ. ಭಾರತ ಎಷ್ಟೇ ಕೈಗಾರೀಕೃತಗೊಳ್ಳಲಿ ದೇಶದ ಜನಸಂಖ್ಯೆಯ ಅರ್ಧದಷ್ಟು ಜನರು ಹಳ್ಳಿಗಳಲ್ಲಿಯೇ ಇರುವಂಥವರಾಗಿರುತ್ತಾರೆ. ಭೂಮಿಯನ್ನೂ, ಕೃಷಿಯನ್ನೂ ಬಿಟ್ಟು ಹೋಗದಂತವರಾಗಿರುತ್ತಾರೆ. ೨೦೨೦ರ ವೇಳೆಗೂ ಭಾರತ ಕೃಷಿ ಪ್ರಧಾನ ದೇಶವಾಗಿಯೇ ಉಳಿದಿರುತ್ತದೆಂಬುದನ್ನು ನಮ್ಮ ದೇಶದ ಪ್ರಧಾನಿ, ಅರ್ಥಮಂತ್ರಿ,

ಯೋಜನಾ ಆಯೋಗದ ಉಪಾಧ್ಯಕ್ಷ, ರಾಜ್ಯದ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಜಗತ್ತಿನ ಯಾವ-ಯಾವ ದೇಶಗಳಲ್ಲಿ ನಗರೀಕರಣ ಹೆಚ್ಚಾಗಿ ಆಗಿದೆಯೋ ಅಲ್ಲಿಯ ಜನ ಹುಚ್ಚರಾಗುತ್ತಿದ್ದಾರೆ; ಹಿಪ್ಪಿಗಳಾಗಿ ಅರೆಬೆತ್ತಲೆ ಅನಾಗರೀಕರಂತೆ ವಿಶ್ವ ಪರ್ಯಟನೆ ಮಾಡುತ್ತಿದ್ದಾರೆ ಅಂಥವರನ್ನು ನಮ್ಮ ದೇಶದ ನಗರಗಳಲ್ಲಿಯೂ, ಪ್ರೇಕ್ಷಣೀಯ ಸ್ಥಳಗಳಲ್ಲಿಯೂ ಕಾಣುತ್ತಿದ್ದೇವೆ. ಇಂಥ ದುರ್ಗತಿ ನಮ್ಮ ದೇಶದ ಯುವಕ-ಯುವತಿಯರಿಗೆ ಬರಬಾರದೆಂಬ ಹೊಣೆಗಾರಿಕೆ ನಮ್ಮ ದೇಶದ ನಾಗರೀಕರಿಗೆ ಇರುವುದಾದರೆ ಅವರು ಹಳ್ಳಿಗಳನ್ನು ನಾಶಮಾಡುವ ಜನರನ್ನು ಭೂಮಿಯಿಂದ ಒಕ್ಕಲೆಬ್ಬಿಸುವ ವಿಚಾರವನ್ನು ತಕ್ಷಣವೇ ಕೈಬಿಡಲಿ. ಬೃಹತ್ ನಗರಗಳ ಬದಲಾಗಿ ಗ್ರಾಮಗಳ ಜೀವನವನ್ನು ಉತ್ತಮ ಪಡಿಸಲು ಯೋಜನೆ ಹಾಕಿಕೊಳ್ಳಲಿ. ಜಯಪ್ರಕಾಶ್ ನಾರಾಯಣರು ಹೇಳಿದಂತೆ ನಮ್ಮ ದೇಶದ ಅಭಿವೃದ್ಧಿ, ಆರ್ಥಿಕ ನೀತಿ ತಲೆಕೆಳಗಾದ ಪಿರಾಮಿಡ್‌ನಂತಾಗದಿರಲಿ. ೨೧ನೇ ಶತಮಾನ, ೨೨ನೇ ಶತಮಾನದಂಥ ಮಾತುಗಳು ನಿಲ್ಲಲಿ. ಶತಮಾನಗಳು ಬರುತ್ತವೆ, ಹೋಗುತ್ತವೆ ಅದಕ್ಕಾಗಿ ನಮ್ಮ ವರ್ತಮಾನ ಶತಮಾನದ ವಾಸ್ತವತೆಯನ್ನು ಬಲಿಕೊಡಬೇಕಾಗಿಲ್ಲ. ಬೇಂದ್ರೆಯವರ ಮಾತಿನಂತೆ ಜಗತ್ತಿನ ಆಯುಷ್ಯ ಕಾಣದ ಕಡಲ ಹಾದಿ ಹಿಡಿದಿದೆ. ನಮ್ಮದನ್ನು ಉಳಿಸಿ, ಬೆಳಸಿಕೊಂಡು ಹೋಗಬೇಕಿದೆ. ಇದರ ಸಂಕೇತವಾಗಿ ಕಾಮಧೇನು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಗೋವು ನಮ್ಮ ರಾಷ್ಟ್ರೀಯ ಜೀವಿಯೆಂದು ಭಾರತೀಯರಿಂದ ಮಾನ್ಯಗೊಳ್ಳಲಿ. ಕಾಮಧೇನುವಿನ ರಕ್ಷಣೆಗಾಗಿ ಈಗ ದೇಶದ ಅಲ್ಲಲ್ಲಿ ನಡೆಯುತ್ತಿರುವ ಆಂದೋಲನಗಳನ್ನು ಬಲಪಡಿಸುವ ಪ್ರಯತ್ನ ದೇಶವಾಸಿಗಳೆಲ್ಲರಿಂದ ನಡೆಯಲಿ. ಈ ನಿಟ್ಟಿನಲ್ಲಿ ೧೯೫೪ರಿಂದಲೇ ಸರ್ವೋದಯ ಕಾಯಕರ್ತರು ಮುಂಬೈಯಲ್ಲಿಯ ದೇವನಾರ್ ಕಸಾಯಿಖಾನೆಯ ಮುಂದೆ ಅಖಂಡವಾಗಿ ಸತ್ಯಾಗ್ರಹ ನಡೆಸಿದ್ದಾರೆ. ೨೦೦೬ ಅಕ್ಟೋಬರ್‌ನಿಂದ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಯವರು ಗೋ ರಕ್ಷಣೆಗಾಗಿ ಬೃಹತ್ ಆಂದೋಲನವನ್ನೇ ಹೂಡಿದ್ದಾರೆ.

ಜಗತ್ತು ಉಳಿಯಬೇಕಿದ್ದರೆ, ಮಾನವಕುಲ ಉಳಿಯಬೇಕಿದ್ದರೆ ಗೋವು ಮತ್ತು ಚರಕದ ಹಿಂದಿರುವ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ವಿಚಾರಗಳನ್ನು ಅಭಿವೃದ್ಧಿಯ ಧ್ರುವತಾರೆಯನ್ನಾಗಿ ಇಟ್ಟುಕೊಳ್ಳಬೇಕೇ ಹೊರತು ಶಸ್ತ್ರಾಸ್ತ್ರಗಳನ್ನಲ್ಲ, ಅಣುಸ್ಥಾವರಗಳನ್ನಲ್ಲ, ಗಗನನೌಕೆಗಳನ್ನಲ್ಲ. ವಿಶ್ವದ ಪ್ರಮುಖ ಧರ್ಮಗಳೆಲ್ಲವೂ ಒಂದಲ್ಲಾ ಒಂದು ರೀತಿಯಲ್ಲಿ, ಒಂದಲ್ಲಾ ಒಂದು ಕಾರಣಕ್ಕಾಗಿ ಪಶುವಧೆಯನ್ನು ವರ್ಜಿಸಿವೆ.

"ದೇವರು ಖನಿಜದಲ್ಲಿ ಮಲಗಿದ್ದಾನೆ, ಸಸ್ಯಗಳಲ್ಲಿ ಏಳುತ್ತಾನೆ, ಪ್ರಾಣಿಗಳಲ್ಲಿ ನಡೆಯುತ್ತಾನೆ ಮತ್ತು ಮನುಷ್ಯರಲ್ಲಿ ಚಿಂತನೆ ಮಾಡುತ್ತಾನೆ" ಎಂಬೀ ಶ್ರೇಷ್ಠ ಮೌಲ್ಯವನ್ನು ಮತ್ತು ಕನಸನ್ನು ಪುನಶ್ಚೇತನಗೊಳಿಸುವ ಕಾಲ ಬಂದಿದೆ.

* * *

ಭಾರತೀಯ ಸಂಸ್ಕೃತಿಯ ಬಗ್ಗೆ ಬಭ್ರುವಾಹನ ದೃಷ್ಟಿ ಅಗತ್ಯ

– ವಾಸುದೇವ ಅಗರವಾಲ್

ಒಂದು ರಾಷ್ಟ್ರದ ಅಭ್ಯುದಯದಲ್ಲಿ ಸಂಸ್ಕೃತಿಯ ಮಹತ್ವ ಬಹಳ ಹೆಚ್ಚು. ಸಂಸ್ಕೃತಿ ಮಾನವ ಜೀವನದ ಉಸಿರು. ಸಂಸ್ಕೃತಿ ಯೋಗಕ್ಷೇಮದಿಂದಿದ್ದರೆ ಮನುಷ್ಯ ಬೆಳೆಯುತ್ತಾನೆ. ಜೊತೆಗೆ ಜೀವನದಲ್ಲಿ ಲಭಿಸಿದ ಬುದ್ಧಿಯನ್ನು ಹೆಚ್ಚು ವಿಕಾಸಗೊಳಿಸುತ್ತಾನೆ. ಹಿಂದಿನಕಾಲದಲ್ಲಿ ಭಾರತೀಯ ಸಂಸ್ಕೃತಿ ಶಕ್ತಿಯುತವಾಗಿತ್ತು. ಅದು ಅನೇಕ ಸೃಜನಾತ್ಮಕ ಪ್ರವೃತ್ತಿಗಳಿಗೆ ಜನ್ಮ ಕೊಟ್ಟಿತ್ತು. ಈ ಕಾರಣದಿಂದ ಸಾಹಿತ್ಯ, ಧರ್ಮ, ದರ್ಶನ, ಕಲೆ ಮತ್ತು ಜೀವನ ನಾನಾಮುಖವಾಗಿ ಬೆಳೆದವು. ಭಾರತದ ಈ ಬೆಳವಣಿಗೆ ನಮಗೆ ಉತ್ತರಾಧಿಕಾರಿಯ ರೂಪದಲ್ಲಿ ಸಿಕ್ಕಿದೆ. ಈಗ ಅದರ ಉತ್ತಮ ಸಾರರೂಪವಾದ ಅಂಶಗಳನ್ನು ರಕ್ಷಿಸಬೇಕಿದೆ. ಇದು ನಮ್ಮ ಆದ್ಯ ಕರ್ತವ್ಯ. ಏಕೆಂದರೆ ಅದರಿಂದಲೇ ನಾವು ಬದುಕಿದ್ದೇವೆ. ಅದರ ಅಮೃತಜಲದಿಂದ ಬಲ ಪಡೆದು ಮುಂದೆ ಕೂಡ ಬಾಳ ಬಯಸುತ್ತೇವೆ.

ಈ ಸಮಯದಲ್ಲಿ ಎರಡು ಆಂದೋಳನಗಳು ನಡೆಯುತ್ತಿವೆ. ಇವುಗಳನ್ನು ಸ್ಪಷ್ಟತಃ ಗುರುತು ಹಚ್ಚಬಹುದು. ಮೊದಲನೆಯದಾಗಿ ವಿಶ್ವದ ಅನೇಕ ದೇಶಗಳಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಅಭಿರುಚಿ ಕಂಡುಬರುತ್ತಿದೆ; ಎರಡನೆಯದು, ಸ್ವತಃ ನಮ್ಮ ದೇಶದಲ್ಲೇ ಸಂಸ್ಕೃತಿಯ ಶತಧಾರೆ ಪ್ರವಾಹ ಪುನಃ ಅನೇಕ ಕ್ಷೇತ್ರಗಳಲ್ಲಿ ಹರಿಯಲಾರಂಭಿಸಿದೆ. ಇದರಿಂದ ರಾಷ್ಟ್ರಮಾನಸದಲ್ಲಿ ಹೊಸ ಸ್ವಾಭಿಮಾನ ಜನ್ಮ ತಳೆದಿದೆ. ಈ ಸ್ವಾಭಿಮಾನದ ಸ್ರೋತ ಆರಂಭವಾದುದು ಸುಮಾರು ೧೦೦ ವರುಷಗಳಷ್ಟು ಹಿಂದೆ; ಅಂದರೆ ೧೯ನೇ ಶತಮಾನದಲ್ಲಿ. ಆ ಕಾಲದಲ್ಲಿ ದೇಶದ ಅನೇಕ ವೀರ ಸೇನಾಪತಿಗಳು ರಾಜನೈತಿಕ ಕ್ಷೇತ್ರಕ್ಕಿಳಿದು ವಿದೇಶೀ ಸೈನಿಕ ಬಲದೊಡನೆ ಸೆಣಸಬೇಕೆಂಬುದಾಗಿ ತೀರ್ಮಾನಿಸಿದರು. ಅದನ್ನು ಸ್ವಾತಂತ್ರ್ಯದ ಪ್ರಥಮ ಸಂಗ್ರಾಮ ಎಂದೆನ್ನಲಾಗುತ್ತದೆ.

ಆ ಸಂಘರ್ಷದಲ್ಲಿ ಭಾರತದ ಸೈನ್ಯಶಕ್ತಿಯು ಪರಾಜಿತಗೊಂಡಿತಾದರೂ ಇಲ್ಲಿನ ರಾಷ್ಟ್ರೀಯ ಆತ್ಮದ ಕಿಡಿ ಮಾತ್ರ ಆರಿಹೋಗಲಿಲ್ಲ. ಅದು ಹೊಸದೊಂದು ದಿಕ್ಕಿನಲ್ಲಿ ಪ್ರಜ್ವಲಿಸಲಾರಂಭಿಸಿತು. ಶತಮಾನದ ಉತ್ತಾರಾರ್ಧದ ಇತಿಹಾಸದ ಮೇಲೆ ದೃಷ್ಟಿ ಬೀರಿದರೆ, ಅಲ್ಲಿ ನಮಗೆ ಈ ಸಾಂಸ್ಕೃತಿಕ ಪುನರುತ್ಥಾನದ ರೂಪದ

ಸಪ್ತಕಸ್ವರಗಳು ಕೇಳಿಬರಲಾರಂಭಿಸುತ್ತವೆ. ಈ ಸ್ವರಗಳು ಒಮ್ಮೆ ಮಂದವಾದರೆ, ಮತ್ತೊಮ್ಮೆ ಮೇಲಕ್ಕೇರಿದವು. ಆದರೆ ಅವುಗಳ ಅಸ್ತಿತ್ವದ ಬಗ್ಗೆ ಮಾತ್ರ ಸಂದೇಹಪಡಲಾಗದು. ಸ್ವಾಮಿ ದಯಾನಂದ ಸರಸ್ವತಿಯವರು ರಾಷ್ಟ್ರೀಯ ಪುನರುತ್ಥಾನದ ಪ್ರತಿಯೊಂದು ಸ್ಫುಟ ಚಿತ್ರವನ್ನೂ ಕುರಿತು ವಿಚಾರಮಾಡಿದರು. ಆ ಸಪ್ತಕಸ್ವರಗಳಿವು:–ಸ್ವಸಂಸ್ಕೃತಿ, ಸ್ವಭಾಷೆ, ಸ್ವಧರ್ಮ, ಸ್ವದೇಶಿ, ಸ್ವಸಾಹಿತ್ಯ ಮತ್ತು ಸ್ವಭೂಮಿ. ಈ ರೀತಿಯ ಅನೇಕ ಸ್ವಾಯತ್ತ ಹಿನ್ನೆಲೆಗಳ ರೂಪದಲ್ಲಿ ಆ ಮಹಾನುಭಾವರು ರಾಷ್ಟ್ರೀಯ ಮಹಾ ಸ್ವರಾಜ್ಯದ ಕಲ್ಪನೆ ಮಾಡಿದರು. ಸಂಸ್ಕೃತಿಯ ವಿಶಾಲ ಸ್ವರೂಪ ಇದಾಗಿತ್ತು. ಇದನ್ನು ಸಂಸ್ಕೃತಿಯ ವ್ಯಾಪಕವಾದ ಸಂಗೀತವೆಂದೇ ಹೇಳಬೇಕು. ಇವುಗಳ ಪೈಕಿ ಪ್ರತಿಯೊಂದು ಸ್ವರವನ್ನೂ ಹಿಡಿದು ಅನೇಕ ಮಧ್ಯಂತರ ಧ್ವನಿಗಳೂ ಸಹ ಹುಟ್ಟಿಕೊಂಡವು. ವೇದಗಳಲ್ಲಿ ಯಾವುದನ್ನು ಗೋವಿನ ರೂಪವುಳ್ಳ ಶತಧಾರೆಗಳ ಬುಗ್ಗೆ ಎಂದೆನ್ನಲಾಗಿದೆಯೋ, ಅಂತಹುದೇ ಸಾಂಸ್ಕೃತಿಕ ಚಿಲುಮೆಯೊಂದು ನಮ್ಮ ದೇಶದಲ್ಲಿ ಪ್ರವಹಿಸಲಾರಂಭಿಸಿತು. ರಾಷ್ಟ್ರೀಯ ಅಭ್ಯುತ್ಥಾನದ ಪ್ರತಿಯೊಂದು ಆಂದೋಳನವೂ, ಈ ಪ್ರವಾಹಿತ ಜಲದಿಂದ ಪೋಷಿಸಲ್ಪಟ್ಟಿದೆ. ಈ ಆದರ್ಶವನ್ನು ಪಡೆಯಲೋಸುಗ ಲಕ್ಷಾಂತರ ವ್ಯಕ್ತಿಗಳು ತ್ಯಾಗಮಾಡಿದ್ದಾರೆ. ಕಷ್ಟಗಳನ್ನು ಅನುಭವಿಸಿದ್ದಾರೆ. ಅವರ ಬಳಿಯಿದ್ದ ಬುದ್ಧಿಬಲ ಮತ್ತು ಶರೀರಬಲವನ್ನು ಸದುಪಯೋಗಪಡಿಸಿದ್ದಾರೆ. ತತ್ಫಲವಾಗಿ ಯಾವುದೋ ಪರ್ವತದ ಗುಹೆಯಲ್ಲಿ ಮಲಗಿದ್ದ ಭಾರತೀಯ ರಾಷ್ಟ್ರಪುರುಷ ರೂಪದ ಮುಚಕುಂದನು ಎಚ್ಚೆತ್ತುಕೊಂಡ. ಆತನ ಕಣ್ಣುಗಳಿಂದ ಹೊರಟ ಜ್ವಾಲೆಗಳಿಂದ ಯುಗಯುಗಾಂತರಗಳ ಕತ್ತಲು ದೂರ ಸರಿದುಹೋಯಿತು. ಆ ಜಾಗರಣೆಯ ಕುರುಹುಗಳು ಈಗ ಎಲ್ಲೆಲ್ಲೂ ಕಂಡುಬರುತ್ತಿವೆ.

ಈಗ ಸ್ವರಾಜ್ಯದ ಕಾರ್ಯಕ್ರಮ ಪೂರ್ಣಗೊಂಡಿದೆಯೆಂದು ಭಾವಿಸಬೇಕು. ಏಕೆಂದರೆ ವಿದೇಶೀ ಶಾಸನ ದೂರ ಸರಿಯಿತು. ಸ್ವರಾಜ್ಯ ಸ್ಥಾಪಿತಗೊಂಡಿದೆ. ಆದರೆ ಈ ಸ್ವರಾಜ್ಯ ಅನ್ನುವುದು ನಿರಂತರವಾಗಿ ಸಾಗುವ ಒಂದು ಪ್ರಯೋಗ. 'ಯತೇಮಹಿ ಸ್ವರಾಜ್ಯೇ' ಮತ್ತು 'ಅರ್ಚನ್ನನು ಸ್ವರಾಜ್ಯಂ' ಎಂಬ ಈ ಆರ್ಷ ವಾಕ್ಯಗಳ ತಾತ್ಪರ್ಯ ಕೂಡ ಇದೇ. ನಾವು ಸ್ವರಾಜ್ಯಕ್ಕೆ ಸಂಬಂಧಪಟ್ಟ ಪ್ರಯತ್ನಗಳನ್ನು ಎಂದೂ ಶಿಥಿಲಗೊಳಿಸಬಾರದು. ದೇಶದಲ್ಲಿ ಸ್ವರಾಜ್ಯ ಮತ್ತು ಸುರಾಜ್ಯಗಳು ರಥದ ಎರಡು ಚಕ್ರಗಳು; ಇವು ಜೊತೆ–ಜೊತೆಯಲ್ಲಿರುವಂತೆ ನಾವು ಸದಾ ಪ್ರಯತ್ನಶೀಲರಾಗಿರಬೇಕಾಗುತ್ತದೆ. ಇದಕ್ಕಾಗಿ ಪರರನ್ನು ನಿಂದಿಸಿ ಪ್ರಯೋಜನವಿಲ್ಲ. ಅದಕ್ಕೆ ಬದಲು ಸ್ವತಃ ನಮ್ಮ ಹೆಗಲಮೇಲೆ ಈ ಹೊರೆ ಹೊರಬೇಕು. ಈ ಕಾರ್ಯವನ್ನು ಬುದ್ಧಿಯ ಯುಕ್ತಿಯಿಂದ ಸಾಧಿಸಬೇಕು. ಗಾಂಧೀಜಿಯವರು ಮಣ್ಣಿನಿಂದ ಹೊನ್ನಮನಸ್ಸುಳ್ಳ ವ್ಯಕ್ತಿಗಳನ್ನು ತಯಾರಿಸಿದರು. ಅಂತೆಯೇ ಆ ಯುಕ್ತಿಯನ್ನು

ಈಗ ಮತ್ತೊಮ್ಮೆ ಸಾಧಿಸಬೇಕಾಗಿದೆ. ಅಧಿಕಾರದ ಮೋಹ ಒಂದು ಕುಷ್ಠರೋಗದಂತೆ. ಅದರ ಕುರೂಪತನದಿಂದ ರಕ್ಷಿಸಿಕೊಳ್ಳಲೇಬೇಕು. ಸ್ವದೇಶಿಯನ್ನು ಕುರಿತಂತೆ ಭಿನ್ನಾಭಿಪ್ರಾಯವೇನಿಲ್ಲ. ಏಕೆಂದರೆ ರಾಷ್ಟ್ರವು ಅತ್ಯಂತ ವ್ಯಾಪಕ ಕ್ಷೇತ್ರದಲ್ಲಿ ಸ್ವದೇಶೀ ವಸ್ತುಗಳನ್ನು ತನ್ನದಾಗಿಸಿಕೊಳ್ಳುತ್ತಿದೆ. ಇಟಲಿ, ಜೆಕೊಸ್ಲೊವಾಕಿಯಾ, ಫ್ರಾನ್ಸ್ ಮತ್ತು ಜಪಾನಿನಂತಹ ಸಣ್ಣ ರಾಷ್ಟ್ರಗಳು 'ಸ್ವದೇಶಿ'ಗೆ ಸಂಬಂಧಿಸಿದಂತೆ ಏನು ಮಾಡಬಲ್ಲವೋ, ಅದನ್ನು ನಾವೂ ಸಹ ಮಾಡಬಲ್ಲೆವು-ಎಂಬ ಈ ವಿಷಯವನ್ನು ಕುರಿತಾದ ನಮ್ಮ ನಿಶ್ಚಯವು ದೃಢವಾಗ ಬೇಕು.

ಜೀವನಕ್ಕೆ ಆವಶ್ಯಕವಾದ ಪ್ರತಿಯೊಂದು ವಸ್ತುವನ್ನೂ ನಮ್ಮಲ್ಲಿ ತಯಾರಿಸಬೇಕು. ಜೊತೆಗೆ ಯಾವ ವಸ್ತು ನಮ್ಮಲ್ಲಿ ತಯಾರಾಗದೋ ಅದನ್ನು ಬಳಸಕೂಡದು. ಯಾವ ವಸ್ತುಗಳನ್ನು ಸ್ವದೇಶದಲ್ಲಿ ಸಿದ್ಧಪಡಿಸುವ ಅಗತ್ಯ ಉಂಟೋ ಅವುಗಳ ಒಂದು ಪಟ್ಟಿಯನ್ನು ಜನರಲ್ಲಿ ಪ್ರಚಾರಪಡಿಸಬೇಕು. ಭಾರಿ ಉದ್ಯೋಗ ಹಾಗೂ ಕುಟೀರ ಉದ್ಯೋಗಗಳ ರೂಪದಲ್ಲಿ ಅವುಗಳ ನಿರ್ಮಾಣ ಸಾಗಬೇಕು. ದೇಶದ ಅನೇಕ ಕ್ಷೇತ್ರಗಳಲ್ಲಿ ಈ ತರಹದ ಕರ್ಮಶಾಲೆ(ಕಾರಖಾನೆ)ಗಳು ಹುಟ್ಟಿಕೊಳ್ಳುತ್ತಿವೆ ಎಂಬುದು ಸಂತೋಷದ ಸುದ್ದಿ. ಆದರೆ ಅವುಗಳ ಸಂಖ್ಯೆಯಲ್ಲಿ ಇನ್ನೂ ಏರಿಕೆ ಬರಬೇಕಾದ ಅಗತ್ಯವಿದೆ. ಅದಕ್ಕೋಸ್ಕರ ಎರಡು ಗಾಲಿಗಳಿವೆ. ಒಂದು ಕಚ್ಚಾವಸ್ತುಗಳ ಮುಕ್ತಿ. ಎರಡು ಬಂಡವಾಳದ ಮುಕ್ತಿ (ಅಂದರೆ ಇವೆರಡೂ ಧಾರಾಳವಾಗಿ ಸಿಕ್ಕುವ ಸ್ಥಿತಿಯಲ್ಲಿರಬೇಕು). ಇವುಗಳಲ್ಲಿ ರಾಷ್ಟ್ರೀಯ ಉದ್ಯೋಗಗಳ ಗಾಡಿ ಮುಂದೆ ಸಾಗಬಲ್ಲದು. ಸರಕಾರಿ ಕಛೇರಿಗಳ ಮುಖಸ್ತುತಿಯ ಬಲೆಯಿಂದ ಈ ಉದ್ಯೋಗಗಳನ್ನು ಬಿಡಿಸಬೇಕಾದುದು ಆವಶ್ಯಕ. ಈಗ ನಮ್ಮಲ್ಲಿ ಕಂಡು ಬರುತ್ತಿರುವ ವಾತಾವರಣ ಉಸಿರು ಕಟ್ಟಿಕೊಂಡಿರುವಂಥದ್ದು. ಇದು ಕೊನೆಗೊಳ್ಳಲೇಬೇಕು.

ಸ್ವಭಾಷೆ ಮತ್ತು ಸ್ವಸಾಹಿತ್ಯದ ಬಗ್ಗೆ ಅತ್ಯಂತ ಹೆಚ್ಚು ಸ್ಪಷ್ಟ ರೀತಿಯಲ್ಲಿ ವಿಚಾರಮಾಡಬೇಕಾದದೂ ಆವಶ್ಯಕವಾಗಿದೆ. ಸಂವಿಧಾನದಲ್ಲಿ ಹೇಳಿರುವ ಸಮಸ್ತ ಪ್ರಾದೇಶಿಕ ಭಾಷೆಗಳಿಗೆ, ಸ್ವ-ವಿಕಾಸಕ್ಕೆ ತಕ್ಕ ಸ್ವಾತಂತ್ರ್ಯ ಲಭಿಸಬೇಕು. ಒಂದು ರೀತಿಯಿಂದ ನೋಡಿದರೆ ಅದು ಲಭಿಸಿಯೂ ಇದೆ. ಪ್ರತಿಯೊಂದು ಭಾಷೆಯ ಪ್ರಾಚೀನ ಮತ್ತು ಅರ್ವಾಚಿನ ಸಾಹಿತ್ಯ ಏನಿದೆಯೋ ಅದನ್ನು ಪ್ರಕಟಿಸುವ ಹೊಣೆ ಪ್ರಾದೇಶಿಕ ರಾಜ್ಯಗಳು ಹಾಗೂ ಸಾಹಿತ್ಯ ಸಂಸ್ಥೆಗಳ ಮೇಲಿದೆ. ಅನೇಕ ಕ್ಷೇತ್ರೀಯ ಸಾಹಿತ್ಯಕ ಸಂಸ್ಥೆಗಳ ಪ್ರವೃತ್ತಿಗಳು ಬಹು ಉತ್ಸಾಹವರ್ಧಕವಾಗಿವೆ. ಕೇಂದ್ರೀಯ ಶಾಸನವು ಖುದ್ದಾಗಿ ಈ ವ್ಯವಹಾರದಲ್ಲಿ ತಲೆಯಿಡಕೂಡದು. ಬದಲು ಸ್ಥಾನೀಯ ಸಾಹಿತ್ಯಕ ಸಂಸ್ಥೆಗಳು, ಪ್ರಕಾಶಕರು ಮತ್ತು ಲೇಖಕರಿಗೆ ನಿಯಮಬದ್ಧವಾಗಿ ಸಹಾಯ ನೀಡಿ ಈ ಕಾರ್ಯಗಳನ್ನು ಹೆಚ್ಚುವರಿಸಬೇಕು. ಪ್ರತಿಯೊಂದು ಒಳ್ಳೆಯ

ಪ್ರಕಟಣೆಯ ಒಂದು ಸಾವಿರ ಪ್ರತಿಗಳನ್ನು ಕೇಂದ್ರ ಹಾಗೂ ಪ್ರಾಂತ ಸರಕಾರಗಳು ಜೊತೆಗೂಡಿ ಕೊಂಡುಕೊಂಡು ಬಿಡಬೇಕು. ಆಗ ನೋಡಿ! ಪ್ರತಿಯೊಂದು ಭಾಷೆಯ ಪ್ರಕಾಶಕರೂ ಒಳ್ಳೆ ಗ್ರಂಥಗಳ ಒಂದು ಸುಮೇರು ಪರ್ವತವನ್ನೇ ನಿರ್ಮಿಸಿಬಿಡುತ್ತಾರೆ. ಶ್ರೇಷ್ಠವಾದ ಪ್ರಾಚೀನ ಹಾಗೂ ಪರಿನಿಷ್ಠಿತ ಗ್ರಂಥಗಳು ಉತ್ಕೃಷ್ಟವಾದ ರಾಜ-ಸಂಸ್ಕರಣಗಳಲ್ಲಿ ಕೂಡ ಪ್ರಕಟಗೊಳ್ಳಬೇಕು. ದೇಶ-ವಿದೇಶದ ಪುಸ್ತಕಾಲಯಗಳು ಇವುಗಳಿಗೆ ತಮ್ಮಲ್ಲಿ ಸನ್ಮಾನಿತ ಸ್ಥಾನವನ್ನೀಯಬೇಕು. ತುಲಸೀದಾಸರ 'ಮಾನಸ', ಜ್ಞಾನೇಶ್ವರೀ, ಸೂರ್ ಸಾಗರ್, ಕಬೀರ್, ವಿದ್ಯಾಪತಿ, ಜಾಯಸೀ, ಕೃತಿವಾಸ, ಶಂಕರದೇವ ಮುಂತಾದವರಿಂದ ರಚಿಸಲ್ಪಟ್ಟ ಸಾಹಿತ್ಯವು ವಿಶ್ವದಲ್ಲಿ ಪ್ರಚಾರಪಡಿಸಬೇಕಾದಂತಹ ಶ್ರೇಣಿಗೆ ಸೇರಿದೆ. ಸುಂದರ ಹಾಗೂ ಕಣ್ಣಿಗೆ ಹಬ್ಬವನ್ನುಂಟುಮಾಡುವಂಥ ಸಂಸ್ಕರಣಗಳ ಸತ್ರ ನಮ್ಮ ದೇಶದಲ್ಲಿ ಇನ್ನೂ ಆರಂಭಿಸಿಲ್ಲ.

ಭಾರತದ ಸಾಹಿತ್ಯಕ ಉತ್ತರಾಧಿಕಾರವು ಬಹಳ ಗೌರವಶಾಲಿಯಾದುದು. ಆ ಸಾಹಿತ್ಯದಲ್ಲಿರುವ ಅತ್ಯುತ್ತಮ ಗ್ರಂಥ-ರತ್ನಗಳನ್ನು ಪ್ರಕಟಿಸಬೇಕು. ಇಂಥ ಗ್ರಂಥಗಳು ಹೆಚ್ಚು ಬೆಲೆಯ ಮತ್ತು ಅಗ್ಗವಾದ ಈ ಎರಡೂ ಸಂಸ್ಕರಣಗಳಲ್ಲಿ ಮುದ್ರಿತವಾಗಬೇಕು. ಇದು ನಮ್ಮ ಆದ್ಯ ಹೊಣೆಯಾಗಿದೆ. ದೇಶ-ವಿದೇಶಗಳಲ್ಲಿ ಅವುಗಳು ಪ್ರಚಾರಗೊಳ್ಳುವಂತೆ ವ್ಯವಸ್ಥೆಮಾಡಬೇಕು. ಏಕೆಂದರೆ ಸದ್ಗ್ರಂಥಗಳು ಸಂಸ್ಕೃತಿಯ ಅಗ್ರದೂತರಂತೆ. ಸಾರ್ವಜನಿಕ ಪುಸ್ತಕಾಲಯದಲ್ಲಿ ಇವುಗಳಿಗೆ ಸನ್ಮಾನಿತ ಸ್ಥಾನ ಕೊಡಲಾಗುತ್ತದೆ. ಅಲ್ಲದೆ ಈ ವೇಳೆಯಲ್ಲಂತೂ, ಭಾರತೀಯ ಸಾಹಿತ್ಯದ ಮೂಲಗ್ರಂಥಗಳು ಹಾಗೂ ಅನುವಾದಗಳಿಗೆ ಬಹಳ ಬೇಡಿಕೆ ಕೂಡ ಇದೆ. ಸಂಸ್ಕೃತಕ್ಕೆ ಸಂಬಂಧಿಸಿದಂತೆ ಯಾವ ಯಾವ ಮಾತು ನಿಜವೋ, ಪಾಲಿ ಮತ್ತು ಪ್ರಾಕೃತ ಭಾಷೆಯ ಸಾಹಿತ್ಯದ ದೃಷ್ಟಿಯಿಂದ ಕೂಡ ಅದು ಅಷ್ಟೇ ನಿಜ. ಪ್ರಾಕೃತ ಭಾಷೆಯ ಪರವಾಗಿಯಂತೂ, ನಮ್ಮ ಶಾಸನವು ಈ ವರೆಗೆ ಪ್ರಾಯಶಃ ಯಾವ ಕಾರ್ಯವನ್ನೂ ಕೈಗೊಂಡಿಲ್ಲ. ಈ ಸ್ಥಿತಿ ದೂರವಾಗಬೇಕು. ಏಕೆಂದರೆ ಪ್ರಾಕೃತ ಸಾಹಿತ್ಯದ ಕ್ಷೇತ್ರ ಕೂಡ ಸಾಕಷ್ಟು ವಿಸ್ತಾರವಾಗಿದೆ. ಆಗಮ, ಟೀಕಾ, ಚೂರ್ಣಿ ಮತ್ತು ಭಾಷ್ಯಗಳ ರೂಪದಲ್ಲಿ ದೊರಕುವ ಸಾಹಿತ್ಯವನ್ನು ಬೆಳಕಿಗೆ ತಂದು ನಾವು ಋಣಮುಕ್ತರಾಗಬೇಕು. ಲಂಡನ್ನಿನ ಪಾಲಿಟೆಕ್ಸ್ಟ ಸಂಸ್ಥೆಯ ತರಹವೇ ನಮ್ಮ ದೇಶದಲ್ಲಿ ಪ್ರಾಕೃತ ಟೆಕ್ಸ್ಟ ಸಂಸ್ಥೆಯ ಸ್ಥಾಪನೆಯಾಗಿದೆ. ಆದರೆ ಹಣದ ಅಭಾವದಿಂದ ಅದರ ಕೆಲಸದ ವೇಗ ಮಂದವಾಗಿ ಬಿಟ್ಟಿದೆ.

ಪ್ರಾಚೀನ ಸಾಹಿತ್ಯದ ವಿಷಯದಲ್ಲಿ ಒಂದು ಮಾತು ಆವಶ್ಯಕ, ಅದೆಂದರೆ ಮೂಲ ಗ್ರಂಥಗಳೊಡನೆ, ಹಲವು ಭಾಷೆಗಳಲ್ಲಿ, ಅವುಗಳಿಗೆ ಒಳ್ಳೆಯ ಪ್ರಾಮಾಣಿಕ ವ್ಯಾಖ್ಯೆಗಳನ್ನು ಕೊಡಬೇಕು. ವೈದಿಕ ಸಾಹಿತ್ಯವಂತೂ ಎಷ್ಟೊಂದು ತೇಜಸ್ವಿಯಾಗಿದೆ

ಎಂದರೆ, ವಿಶ್ವದಲ್ಲಿ ಅದಕ್ಕೆ ಸಮನಾದ ಬೇರೊಂದು ಸಾಹಿತ್ಯ ಇಲ್ಲ. ಅತ್ಯಂತ ಪ್ರಾಚೀನ ಭಾರೋಪೀಯ (ಭಾರತ+ಯೂರೋಪು) ಭಾಷಾ-ಶಾಸ್ತ್ರ, ಗಾಥಾ-ಶಾಸ್ತ್ರ, ದೇವ-ಶಾಸ್ತ್ರ, ಮತ್ತು ಭೌತಿಕ ಜೀವನಕ್ಕೆ ಸಂಬಂಧಪಟ್ಟ ಪರಿಚಯದ ದೃಷ್ಟಿಯಿಂದ, ಅದು ವಿಶ್ವದ ಸರ್ವ-ಪ್ರಾಚೀನ ಹಾಗೂ ಸರ್ವಮಾನ್ಯ ಸಾಹಿತ್ಯವಾಗಿದೆ. ಭಾರತ ವರ್ಷದ ವಿದ್ವಾಂಸರು ಆ ಸಾಹಿತ್ಯ ಪರಂಪರೆಯನ್ನು ಇಂದಿನವರೆಗೆ ಅವಿಚಲ ರೂಪದಲ್ಲಿ ಸುರಕ್ಷಿತವಾಗಿಟ್ಟಿದ್ದಾರೆ. ಈ ಕಾರಣವೇ ಅದರ ಯೋಗ್ಯ ಪ್ರಕಾಶನ ಕೂಡ ರಾಷ್ಟ್ರೀಯ ಹೊಣೆಗಾರಿಕೆಯೇ ಆಗಿದೆ. ಈ ಮಹತ್ವಪೂರ್ಣ ಕಾರ್ಯಕ್ಕೆಂದು ಹೊಸ ಯೋಜನೆ, ಹೊಸ ಸಂಪಾದಕ ಮಂಡಲಿ ಮತ್ತು ಮುದ್ರಣಾಲಯಗಳ ಸಂಘಟನೆ ನಡೆಯಬೇಕು. ಬೌದ್ಧ ಸಂಸ್ಕೃತ ಸಾಹಿತ್ಯ ಮತ್ತು ವಿದೇಶಗಳಲ್ಲಿ ಅನುವಾದಿಸಲ್ಪಟ್ಟ ತ್ರಿಪಿಟಕ ಸಾಹಿತ್ಯದ ಕೆಲಸ ಭಾರತದ್ದೇ ಹೊಣೆಗಾರಿಕೆಯಾಗಿದೆ. ಜಾವಾ, ನೇಪಾಳ, ತಿಬ್ಬತ್, ಚೀಣಾ, ಮಂಗೋಲಿಯಾ, ಮಧ್ಯ-ಏಷಿಯಾದಿಂದ ಅಪಾರ ಹಾಗೂ ಅಪೂರ್ವ ಗ್ರಂಥರಾಶಿಗಳು ಲಭಿಸಿವೆ. ಇವುಗಳ ದೃಷ್ಟಿಯಿಂದ ಭಾರತದಲ್ಲಿ ಅನುವಾದಕ ಮತ್ತು ಸಂಪಾದಕ-ಮಂಡಲಿಗಳು ಸ್ಥಾಪಿತಗೊಳ್ಳಬೇಕು. ಈ ಕೆಲವಾರು ಗ್ರಂಥಗಳು ಭಾರತೀಯ ನಿಟ್ಟನ್ನು ಅಪೇಕ್ಷಿಸುತ್ತಿವೆ. ಈ ಕಾರ್ಯವನ್ನಾರಂಭಿಸಿದವರೆಂದರೆ ಶ್ರೀ ರಘುವೀರರೊಬ್ಬರೇ. ಅವರು ವ್ಯಕ್ತಿ ಅಲ್ಲ, ಸಂಸ್ಥೆಯಾಗಿದ್ದರು. ಅವರು ಅಪೂರ್ಣವಾಗಿ ಬಿಟ್ಟುಹೋಗಿರುವ ಕಾರ್ಯವನ್ನು ಪೂರ್ಣಗೊಳಿಸಬೇಕು.

ಭಾರತೀಯ ಸಾಂಸ್ಕೃತಿಕ ಪುನರುತ್ಥಾನದಲ್ಲಿ ಕಲೆಯ ಉತ್ತರಾಧಿಕಾರ ಎಲ್ಲಕ್ಕಿಂತ ಮಹತ್ವಪೂರ್ಣವಾದುದು. ಇಂದಿನಿಂದ ಸುಮಾರು ೫ ಸಾವಿರ, ೨ ಸಾವಿರ ಅಥವಾ ಸಾವಿರದ ಐನೂರು ವರ್ಷಗಳಿಗೆ ಹಿಂದೆ ಬಾಳಿ ಬದುಕಿದ್ದ ಆ ಭಾರತೀಯ ಜೀವನದ ಪ್ರತ್ಯಕ್ಷ ರೂಪವೇ ಈ ಕಲೆ. ಕಲೆಯ ಕ್ಷೇತ್ರದಲ್ಲಿ ಇಷ್ಟೊಂದು ದೀರ್ಘಾವಧಿಯ ಅವಿಚ್ಛಿನ್ನ ಉತ್ತರಾಧಿಕಾರವು ಬೇರಾವ ದೇಶದಲ್ಲೂ ಇಲ್ಲ. ವಾಸ್ತು, ಸ್ಥಾಪತ್ಯ, ಚಿತ್ರ, ತಾಮ್ರ, ಕಾಂಸ್ಯ, ಮಣ್ಣು ಮುಂತಾಗಿ ಅನೇಕ ಪ್ರಕಾರದ ಕಲಾತ್ಮಕ ಸಾಮಗ್ರಿ, ಭಾರತ ವರ್ಷದಲ್ಲಿ ಎಷ್ಟೊಂದು ಭಾರಿ ಪ್ರಮಾಣದಲ್ಲಿದೆಯೆಂದರೆ, ಬಹುಷಃ ಜಗತ್ತಿನಲ್ಲಿ ಬೇರೆ ಕಡೆ ಅಷ್ಟೊಂದಿರಲಾರದು. ೧೨ನೇ ಶತಮಾನದ ಸುಮಾರಿನಿಂದ, ತಾಳೆ-ಪತ್ರ ಮತ್ತು ಕಾಗದದ ಮೇಲೆ ಬರೆಯಲ್ಪಟ್ಟ ಲಕ್ಷಾಂತರ ಚಿತ್ರಗಳು ಈವರೆಗೆ ಉಳಿದುಕೊಂಡಿವೆ. ಈ ಸಾಮಗ್ರಿಯನ್ನು ಈಗಿನ ಮುದ್ರಣ ಸಾಧನಗಳಿಂದ ಸಮುಚಿತ ರೂಪದಿಂದ ಪ್ರಕಟಪಡಿಸುವುದು ರಾಷ್ಟ್ರೀಯ ಮಹತ್ವದ ಕಾರ್ಯವಾಗಿದೆ. ಹೆಚ್ಚು ತಡಮಾಡದೆ ಇದರ ಯೋಜನೆಯನ್ನು ಲಲಿತ ಕಲಾ ಅಕಾಡೆಮಿಗೆ ವಹಿಸಿಕೊಡಬೇಕು. ಅದು ನಮ್ಮ ರಾಷ್ಟ್ರಕ್ಕೆ ಶಿಕ್ಷಣವನ್ನೀಯುವಂಥದ್ದೇ ಆಗುವುದು. ಅಲ್ಲದೆ ವಿದೇಶಗಳಲ್ಲಿ ಕೂಡ ಭಾರತೀಯ

ಸಂಸ್ಕೃತಿಯ ಯಶಸ್ಸು ಹೆಚ್ಚುವುದು. ಅದರ ಅರ್ಥವನ್ನರಿಯುವ ಒಂದು ಮಹತ್ವಪೂರ್ಣ ಸಾಧನೆ ಕೂಡ ವಿಶ್ವದೆದುರಿಗೆ ಬಂದು ನಿಲ್ಲುತ್ತದೆ. ಭಾರತದ ಸಾಹಿತ್ಯ, ಧರ್ಮ, ದರ್ಶನವು ಎಷ್ಟು ವಿಸ್ತೃತವಾದುದ್ದೋ ಕಲಾ ಕೃತಿಗಳಲ್ಲಿ ಅಷ್ಟೇ ವಿಶಾಲವಾದ ಅರ್ಥವಿದೆ. ಇದರ ಮಹತ್ವದ ಬಗ್ಗೆ ಕೇವಲ ಕಲ್ಪನೆ ಮಾಡಬಹುದು. ಈಗ ಅನೇಕ ಕ್ಷೇತ್ರಗಳಲ್ಲಿ ಕಲೆಗಾಗಿ ಕಾರ್ಯ ನಡೆಯುತ್ತಿದೆ. ವಾಸ್ತವವಾಗಿ ನೋಡಿದರೆ ಕಲೆ ಕೂಡ ಜೀವನದ ಮೂರ್ತ ರೂಪವನ್ನು ನಿರ್ಮಿಸುತ್ತದೆ. ಆದ್ದರಿಂದ ಅನೇಕ ರೂಪಗಳಲ್ಲಿ, ಅದಕ್ಕೆ ಒಂದು ಯೋಜನೆಯ ಮೂಲಕ ಪ್ರೋತ್ಸಾಹವನ್ನೀಯುವುದು ಆವಶ್ಯಕವಾಗಿದೆ. ಕಲೆಯ ಹಲವಾರು ಬಗೆಯ, ಪ್ರಾಚೀನ ಪರಂಪರೆಗಳು ಸುರಕ್ಷಿತವಾಗುಳಿದು ಹೋಗಿವೆ. ಅವುಗಳ ಉದ್ಧಾರ ಕೂಡ ಆಗಬೇಕು. ಬಂಗಾಳದಲ್ಲಿ ಅಲ್ಪನಾ (ರಂಗೋಲೆ), ಬಿಹಾರಿನಲ್ಲಿ ಐಪೆನ್, ಉತ್ತರಪ್ರದೇಶದಲ್ಲಿ (ರಂಗವಲ್ಲಿ) ಚೌಕಾ-ಪೂರನಾ, ರಾಜಾಸ್ಥಾನದಲ್ಲಿ 'ಮೆಹಂದೀ-ಮಾಡನಾ' (ಗೋರಂಟಿ ಎಂಬ ಗಿಡ. ಇದರ ಎಲೆಗಳನ್ನು ಅರೆದು ಕೈಕಾಲುಗಳಿಗೆ, ವಿಶೇಷತಃ ಸ್ತ್ರೀಯರು ಹಚ್ಚಿಕೊಳ್ಳುತ್ತಾರೆ. ಆಗ ಅದು ಸಿಂಧೂರದ ಬಣ್ಣದಂತೆ ಕಂಡು ಬರುತ್ತದೆ), ಗುಜರಾತು ಮತ್ತು ಮಹಾರಾಷ್ಟ್ರ (ಹಾಗೂ ಮೈಸೂರಿನಲ್ಲಿ ಕೂಡ) ರಂಗೋಲೆ, ದಕ್ಷಿಣದಲ್ಲಿ (ಅಂದರೆ ತಮಿಳುನಾಡಿನಲ್ಲಿ) ಕೋಲಮ್-ಇವುಗಳೆಲ್ಲ ಭೂಮಿಯನ್ನು ಸಿಂಗರಿಸುವ ಕಲೆಗಳು. ಇವುಗಳಲ್ಲಿ ಅನೇಕ ತರಹದ ಆಕೃತಿಗಳನ್ನು ಚಿತ್ರಿಸುತ್ತಾರೆ. ಇದರ ಬಗ್ಗೆ ಮತ್ತೊಮ್ಮೆ ಗಮನ ಹರಿಸಲಾಗಿದೆ. ಹಲವು ಕಲಾ ಕೇಂದ್ರಗಳಲ್ಲಿ ಪ್ರಾಚೀನ ಅಲಂಕಾರಗಳನ್ನು ಪುನರುಜ್ಜೀವಿತಗೊಳಿಸಿ, ಅವುಗಳನ್ನು ಉದ್ಯೋಗ-ವ್ಯವಸಾಯಗಳಲ್ಲಿ ಪ್ರಚಲಿತಗೊಳಿಸುವ ಯೋಜನೆಗಳು ನಡೆಯುತ್ತಿವೆ. ಕಲಾತ್ಮಕ ಸಾಮಗ್ರಿಗಳ ದೃಷ್ಟಿಯಿಂದ ತತ್ಸಂಬಂಧದ ಪತ್ರಿಕೆಗಳು ಅತ್ಯಗತ್ಯ ಬೇಕಾಗಿವೆ. ಈಗ ನಮಗಿರುವ ಆವಶ್ಯಕತೆಯೆಂದರೆ ಪ್ರತಿಯೊಂದು ಪ್ರಾದೇಶಿಕ ವಿಭಾಗ ಕೂಡ ಆಯಾ ಭಾಷೆಯಲ್ಲಿ 'ಲಲಿತ-ಕಲಾ' ಪತ್ರಿಕೆಯನ್ನು ಹೊರಡಿಸಬೇಕು. ಇದರ ಮೂಲಕ ಹೆಚ್ಚು-ಹೆಚ್ಚಾಗಿ ಪ್ರಾಚೀನ ಮತ್ತು ನವೀನ ಕ್ಷೇತ್ರೀಯ ಸಾಮಗ್ರಿಗಳನ್ನು ಬೆಳಕಿಗೆ ತಂದು ಹಾಕಬೇಕು.

ಭಾರತದ ಸಾಂಸ್ಕೃತಿಕ ಜಾಗರಣೆ ಮತ್ತು ಪುನರುತ್ಥಾನದ ಒಂದು ಭವ್ಯ ದೃಶ್ಯ ನಮ್ಮ ಮನಸ್ಸಿನ ಮೇಲೆ ಮೂಡುತ್ತದೆ. ಇದರತ್ತ ಪಾಠಕರ ಗಮನವನ್ನು ಸ್ವಲ್ಪಮಟ್ಟಿಗೆ ಸೆಳೆಯಲಾಗಿದೆ. ಈ ವಿಷಯವನ್ನು ಕುರಿತಂತೆ ವಿಚಾರ ಮಾಡಿದಷ್ಟೂ ಕೂಡ ಈ ದೃಶ್ಯವು ಇನ್ನೂ ಹೆಚ್ಚು ಪ್ರಭಾವಕಾರಿಯಾಗಿ ಬಿಡುತ್ತದೆ. ಜನತೆ ಕೂಡ ಈ ನಿಟ್ಟಿನಲ್ಲಿ ಯೋಚಿಸಬೇಕು. ರಾಷ್ಟ್ರದ ಮುಂದಾಳುಗಳೂ ಸಹ ವಿಚಾರಮಾಡಬೇಕಾದ ಪ್ರಮುಖ ಸಂಗತಿಯಿದು. ಇದಕ್ಕಾಗಿ ಎಷ್ಟೇ ಹಣವನ್ನು ಖರ್ಚುಮಾಡಿದರೂ ಕೂಡ, ಅದು ರಾಷ್ಟ್ರದ ಉತ್ಕರ್ಷೆಗಾಗಿಯೇ ಹೊರತು ಬೇರೆಯಲ್ಲ. *(ಅನು: ರಾ.ನಾ.ರತನ್. ಸಾಭಾರ: ಪುಸ್ತಕ ಪ್ರಪಂಚ)*

* * *

ವೇದೋಕ್ತ ಯಜ್ಞಕರ್ಮ

– ವಿನೋಬಾ

ಋಗ್ವೇದದಲ್ಲಿ ಭಗವಂತನ ಉಪಾಸನೆಯ ಪ್ರಕ್ರಿಯೆ ಪೂರ್ಣ ವಿಕಾಸವಾಗಿದೆ. ಜೀವನದಲ್ಲಿ ದೊರೆಯುವ ಅನುಭವದ ಭಾಷೆಯಲ್ಲಿಯೆ ಭಗವಂತನ ಉಪಾಸನೆ ಮಾಡಬಲ್ಲೆವು. ಕರ್ಮ ಮತ್ತು ಜ್ಞಾನಗಳೆರಡರ ಮೂಲಕ ಅನುಭವ ದೊರೆಯುತ್ತದೆ. ಭಗವಂತನ ಉಪಾಸನೆಯಲ್ಲಿ ಇವೆರಡೂ ಅಗತ್ಯ. ಋಗ್ವೇದದಲ್ಲಿ ಉಪಾಸನೆಯ ವರ್ಣನೆಯಿದ್ದರೂ ಕರ್ಮ ಮತ್ತು ಜ್ಞಾನದ ವರ್ಣನೆ ಸ್ವಲ್ಪ ಇದೆ. ಕರ್ಮಕಾಂಡದ ಚರ್ಚೆ ಮಾಡುವ ಶಾಸ್ತ್ರಕ್ಕೆ ಪೂರ್ವ ಮೀಮಾಂಸೆ ಎಂದು, ಜ್ಞಾನಕಾಂಡದ ಚರ್ಚೆ ಮಾಡುವ ಶಾಸ್ತ್ರಕ್ಕೆ ಉತ್ತರ ಮೀಮಾಂಸೆ ಎಂದು ಕರೆಯುತ್ತಾರೆ. ಪೂರ್ವ ಮೀಮಾಂಸೆಯಲ್ಲಿರುವ ಬ್ರಾಹ್ಮಣಕಗಳಲ್ಲಿ ಕರ್ಮದ ವಿಕಾಸವನ್ನು ಹೇಳಿದ್ದರೆ, ಉತ್ತರ ಮೀಮಾಂಸೆಯಲ್ಲಿ ಉಪನಿಷತ್ತುಗಳ ಜ್ಞಾನದ ವಿಕಾಸವನ್ನು ಹೇಳಿದೆ. ಪೂರ್ವ ಮೀಮಾಂಸೆಯಲ್ಲಿ ಹೇಳಲಾದ ನ್ಯಾಯ ಈ ರೀತಿ ಇದೆ – **ಫಲವತಿ ಅಪೂರ್ವೇ ವೇದ ತಾತ್ಪರ್ಯಂ.** ಪಕ್ವವಾಗಿರುವ ಮಾವು ಸಿಹಿಯಿದೆ. ಈ ಜ್ಞಾನ 'ಫಲಯುತವಾಗಿದೆ.' ಈ ಜ್ಞಾನ ಬಂದಮೇಲೆ ಮನುಷ್ಯ ಕಲ್ಲನ್ನು ಬೀಸಿ ಮಾವನ್ನು ಬೀಳಿಸುತ್ತಾನೆ ಮತ್ತು ತಿನ್ನುತ್ತಾನೆ. ಈ 'ಫಲಯುತ' ಜ್ಞಾನ ಅಪೂರ್ವವೇನಲ್ಲ. ಅಂದರೆ ವೇದ ತಿಳಿಸುವ ಜ್ಞಾನ ಫಲಯುತವೂ ಇದೆ, ಅಪೂರ್ವವೂ ಇದೆ.

ಪೂರ್ವ ಮೀಮಾಂಸೆಯಲ್ಲಿಯ ಬ್ರಾಹ್ಮಣ ಗ್ರಂಥಗಳಲ್ಲಿಯ ಕರ್ಮದ ವಿಕಾಸ ಪರಿಪೂರ್ಣವಲ್ಲದಿದ್ದರೂ ಸಾಕಷ್ಟು ವಿಸ್ತಾರವುಳ್ಳದ್ದೂ, ಆಳವುಳ್ಳದ್ದೂ ಆಗಿದೆ. ಅವುಗಳಲ್ಲಿ ಕರ್ಮಕ್ಕೆ ಸಂಬಂಧಿಸಿದಂತೆ ನಾಲ್ಕು ವಿಭಾಗಗಳನ್ನು ಮಾಡಲಾಗಿದೆ:– ೧) ನಿತ್ಯ ಕರ್ಮ, ೨) ನೈಮಿತ್ತಿಕ ಕರ್ಮ, ೩) ಕಾಮ್ಯ ಕರ್ಮ ಮತ್ತು ೪) ನಿಷಿದ್ಧ ಕರ್ಮ.

ವಿಶೇಷವೆಂದೆನಿಸಿಕೊಳ್ಳದಿರುವುದು ನಿತ್ಯಕರ್ಮ. ಆದರೆ ಅದನ್ನು ಮಾಡದೇ ಇರುವುರಿಂದ ದೊಡ್ಡ ದೋಷವಂತೂ ಆಗುತ್ತದೆ. ಈಗ ಸಮಾಜ ಜೀವನದಲ್ಲಿ ಪೂರ್ಣರೂಪವಾಗಿ ವ್ಯಾಪಿಸಿಕೊಂಡಿರುವ ಅನೇಕ ಕರ್ಮಗಳೇನಿವೆ, ಅವು ನಿತ್ಯಕರ್ಮದ ವರ್ಗಕ್ಕೆ ಸೇರಿದಂಥವಾಗಿವೆ. ಉದಾಹರಣೆಗೆ ಸ್ನಾನ, ಸಂಧ್ಯಾವಂದನೆ, ಅಹಿಂಸೆ, ಸತ್ಯ ನುಡಿಯುವುದು ಇತ್ಯಾದಿ.

ಸಂದರ್ಭಾನುಸಾರ ಬರುವಂಥವು ನೈಮಿತ್ತಿಕ ಕರ್ಮಗಳು. ಅವು ಬೇರೆಲ್ಲ

ಕರ್ಮಗಳಿಗಿಂತ ಹೆಚ್ಚು ಅವಶ್ಯಕವಾಗುತ್ತವೆ. ಉದಾಹರಣೆಗೆ ಬೆಂಕಿಯನ್ನು ಆರಿಸುವುದಕ್ಕಾಗಿ ನಿತ್ಯ ಕರ್ಮಗಳಾದ ಸಂಧ್ಯಾವಂದನೆ ಇತ್ಯಾದಿ ಬಿಟ್ಟು ಹೋಗುವುದು ಅವಶ್ಯಕವಾಗುತ್ತದೆ. ರಾಷ್ಟ್ರಕ್ಕೊದಗಿದ ಕಷ್ಟಕಾಲದಲ್ಲಿ ಅಧ್ಯಯನ ಮತ್ತು ಅಧ್ಯಾಪನದಂಥ ಕೆಲಸಗಳನ್ನು ಬಿಟ್ಟು ರಾಷ್ಟ್ರ ಸಂರಕ್ಷಣೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂಥದು ಅತಿ ಅವಶ್ಯಕ ಕರ್ಮವೆನಿಸುತ್ತದೆ.

ಇನ್ನು ಕಾಮ್ಯಕರ್ಮ. ಅದನ್ನು ಯಾವುದಾದರೊಂದು ಇಚ್ಛೆಯನ್ನಿಟ್ಟುಕೊಂಡು ಮಾಡಲಾಗುತ್ತದೆ. ಚಳಿಗಾಲ ಬಂದಾಗ ಬಟ್ಟೆ ಅಗತ್ಯವಾಗುತ್ತದೆ. ಆದ್ದರಿಂದ ಬಟ್ಟೆನೇಯುವುದು ಅಗತ್ಯ. ಇದು ಕಾಮ್ಯಕರ್ಮ. ಕಾಮ್ಯಕರ್ಮ ಕೆಟ್ಟದಾಗಿಯೇ ಇರಬೇಕೆಂದೇನಲ್ಲ.

ನಿಷಿದ್ಧಕರ್ಮ. ಅದನ್ನು ಮಾಡುವುದು ಪಾಪವೆಂದೆನಿಸಿಕೊಳ್ಳುತ್ತದೆ, ಹಾಗೂ ಅದು ಸಮಾಜಕ್ಕೆ ಮತ್ತು ವ್ಯಕ್ತಿಗೆ ಅಹಿತಕರವಾಗಿರುತ್ತದೆ.

ಕರ್ಮದ ಪರಿಣಾಮವನ್ನು ಅವಶ್ಯಕವಾಗಿ ಅನುಭವಿಸಬೇಕಾಗುತ್ತದೆಂಬುದು ಕೂಡ ಒಂದು ಸಿದ್ಧಾಂತ. ಉಚ್ಚರಿಸಲಾಗುವ ಶಬ್ದಗಳು ಜಗತ್ತನ್ನೇ ವ್ಯಾಪಿಸಿಕೊಳ್ಳುತ್ತವೆ. ಅವುಗಳನ್ನು ಯಾರಾದರೂ ಕೇಳುತ್ತಿರಬಹುದು ಅಥವಾ ಕೇಳುತ್ತಿಲ್ಲದೇ ಇರಬಹುದು. ಇದೇ ಪ್ರಕಾರ ಮನಸ್ಸಿನಲ್ಲಿ ಬರುವ ಒಂದು ವಿಚಾರದಿಂದಾಗಿ ಕರ್ಮನಡೆಯುತ್ತದೆ. ಅದರ ಫಲವನ್ನು ಅನುಭವಿಸಬೇಕಾಗುತ್ತದೆ. ಒಳ್ಳೆಯ ಮತ್ತು ಕೆಟ್ಟ ಶಬ್ದಗಳು ಹರಡುವಂತೆಯೆ ಮಾನಸಿಕವಾಗಿರುವ ಒಳ್ಳೆಯ ಮತ್ತು ಕೆಟ್ಟ ವಿಚಾರಗಳದ್ದೂ ಕೂಡ ಪ್ರಸಾರವಾಗುತ್ತದೆ.

ಕರ್ಮದ ವಿಪಾಕ ಪ್ರಕ್ರಿಯೆಯ ಅನುಸಾರವಾಗಿ ಕರ್ಮಗಳ ಫಲವನ್ನು ಅವಶ್ಯವಾಗಿ ಅನುಭವಿಸಬೇಕಾಗುತ್ತದೆ. ಆದ್ದರಿಂದ ಪೂರ್ವ ಮೀಮಾಂಸೆಯು ಸ್ವರ್ಗ, ನರಕ, ಪುನರ್ಜನ್ಮದಂಥ ಕಲ್ಪನೆಯನ್ನು ಮಾಡಿದೆ. ಈ ಕರ್ಮವಿಪಾಕ ಸಿದ್ಧಾಂತದಿಂದ ಹಿಂದೂ ಧರ್ಮಕ್ಕೆ ಬಹಳಷ್ಟು ಲಾಭವಾಗಿದೆ. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳಿಂದ ಚಿತ್ತದ ಶುದ್ಧಿಯಾಗುತ್ತದೆ.

ವರ್ಣಾಶ್ರಮ ವ್ಯವಸ್ಥೆಯು ಹಿಂದೂ ಧರ್ಮದ ಒಂದು ವಿಶೇಷ ಕಲ್ಪನೆಯೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಅದು ಉಚಿತವೂ ಕೂಡ. ನಮ್ಮಲ್ಲಿ ಉಂಟಾಗಿರುವ ಜಾತಿಗಳಿಗೂ ವರ್ಣಕ್ಕೂ ಯಾವ ಸಂಬಂಧವೂ ಇಲ್ಲ. ವರ್ಣವು ಗುಣಾನುಸಾರವಾಗಿದ್ದರೆ, ಜಾತಿ ಕರ್ಮಾನುಸಾರ. ವರ್ಣ ವ್ಯವಸ್ಥೆಯಲ್ಲಿ ಜಾತಿ–ಭೇದಕ್ಕೆ ಅವಕಾಶವೇ ಇಲ್ಲ; ಮೇಲು–ಕೀಳಿನ ಭಾವನೆ ಇಲ್ಲ. ಕೇವಲ ಗುಣಾನುಸಾರವಾಗಿ ಕರ್ಮಗಳ ಹಂಚಿಕೆಯಿದೆ. ವೇದಗಳ ಅಭಿಪ್ರಾಯ ಈ ರೀತಿಯಿದೆ – **ಸ್ವೇ ಸ್ವೇ ಅಧಿಕಾರೆ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ (ಭಾ.ಸಾ. ೨೧.೧)**

ತಮ್ಮ ತಮ್ಮ ಕರ್ತವ್ಯಗಳ ಬಗ್ಗೆ ನಿಷ್ಠೆಯನ್ನಿರಿಸಿಕೊಳ್ಳುವುದೇ ಗುಣ. ನಿಷ್ಠೆಯನ್ನಿರಿಸಿಕೊಳ್ಳದಿರುವುದೇ ದೋಷ. ಆದ್ದರಿಂದ ಸಮಾಜಕ್ಕೆ ಉಪಯೋಗವಾಗಿರುವ ಕರ್ಮಗಳಲ್ಲಿ ಯಾವುದೇ ಮೇಲು-ಕೀಳೆಂಬುದಿಲ್ಲ. ಎಂಜಿನ್ನನ್ನು ನಡೆಸುವವನ ಕೆಲಸ ಎಷ್ಟು ಮಹತ್ವದ್ದೊ ಅಷ್ಟೇ ಮಹತ್ವದ್ದು ರೈಲಿಗೆ ಹಸಿರು-ಕೆಂಪು ನಿಶಾನೆ ತೊರಿಸುವವನ ಕೆಲಸವೂ ಕೂಡ. ಅವನೇನಾದರೂ ತಪ್ಪು ಮಾಡಿದಲ್ಲಿ ರೈಲಿಗೆ ಅಪಾಯವಿದೆ. ಆದ್ದರಿಂದ ಅವನ ಕೆಲಸದ ಮಹತ್ವ ಕಡಿಮೆಯದಲ್ಲ. ಎಂಜಿನ್ ನಡೆಸುವ ಚಾಲಕನ ಜ್ಞಾನವೇನೋ ಹೆಚ್ಚು. ಆದ್ದರಿಂದ ಅವನ ಕರ್ತವ್ಯ ದೊಡ್ಡದು. ನಿಶಾನೆ ತೋರಿಸುವವನಲ್ಲಿ ಹೆಚ್ಚು ಜ್ಞಾನವಿಲ್ಲ, ಹೆಚ್ಚು ಶಕ್ತಿಯಿಲ್ಲ. ಆದ್ದರಿಂದ ಅವನ ಕರ್ತವ್ಯವೇನೋ ಚಿಕ್ಕದು. ಅದು ಚಿಕ್ಕದಾಗಿದ್ದರೂ ಅದರ ಮಹತ್ವವೇನೂ ಕಡಿಮೆಯದಲ್ಲ. ತನ್ನ ಕರ್ತವ್ಯವನ್ನು ಪೂರ್ಣ ನಿಷ್ಠೆಯಿಂದ ಪಾಲಿಸಿದರೆ ಭಗವಂತನ ಆಸ್ಥಾನದಲ್ಲಿ ಕರ್ತವ್ಯಪಾಲಕನ ಯೋಗ್ಯತೆ ಕಡಿಮೆಯಾಗುವುದಿಲ್ಲ. ಇದೇ ವೇದದ ರಹಸ್ಯ. ಹೀಗೆ ವೇದದ್ದು ಎರಡು ನಿರ್ಣಯಗಳಿವೆ. ಒಂದು, ಶಕ್ತಿ ಕಡಿಮೆಯಿದ್ದರೂ ನಿಷ್ಠೆ ಪೂರ್ಣವಾಗಿರಲಿ; ಇನ್ನೊಂದು ತಮ್ಮ ತಮ್ಮ ಕರ್ತವ್ಯದಲ್ಲಿ ನಿಷ್ಠೆಯಿರಲಿ. ಕರ್ತವ್ಯದಲ್ಲಿ ನಿಷ್ಠೆ ಇರುವುದು ಗುಣವಾದರೆ ನಮ್ಮ ಕರ್ತವ್ಯವಲ್ಲದರಲ್ಲಿ ನಿಷ್ಠೆ ಇಡುವುದು ದೋಷ. ನಮ್ಮ ಕರ್ತವ್ಯದಲ್ಲಿ ಗಮನ ಕೊಡದೇ ಇರುವುದು ಹೇಗೆ ದೋಷವೋ ಅದೇ ರೀತಿ ಬೇರೆಯವರ ಕರ್ತವ್ಯದ ಕಡೆಗೆ ಗಮನ ಹರಿಸುವುದೂ ದೋಷ. ಬೇರೆ-ಬೇರೆ ಪ್ರಮಾಣದ ಸಾಮರ್ಥ್ಯ ಹೊಂದಿರುವಂಥ ಜನರನ್ನು ನಾವು ಜಗತ್ತಿನಲ್ಲಿ ನೋಡುತ್ತೇವೆ. ಎಲ್ಲರ ಬುದ್ಧಿಶಕ್ತಿಯೂ ಬೆಳೆಯಲೆಂದು ನಾವೇನೋ ಬಯಸುತ್ತೇವೆ. ಆದರೆ ಈ ಪ್ರಯತ್ನಮಾಡಿದ ಮೇಲೂ ಹೆಚ್ಚು ಮತ್ತು ಕಡಿಮೆಯ ಅಂತರ ಸ್ವಾಭಾವಿಕವಾಗಿ ಉಳಿದುಬಿಡುತ್ತದೆ. ಅಂದರೆ ಸಾಮರ್ಥ್ಯ ಕಡಿಮೆ ಇದ್ದರೂ ಕರ್ತವ್ಯದಲ್ಲಿ ಪೂರ್ಣ ನಿಷ್ಠೆಯನ್ನಿರಿಸಿಕೊಂಡರೆ ಭಗವಂತನ ದೃಷ್ಟಿಯಲ್ಲಿ ನೂರರಷ್ಟು ತೇರ್ಗಡೆಯಾದಂತೆಯೇ.

ಪ್ರಪಂಚದಲ್ಲಿ ಅನೇಕ ಪ್ರಕಾರದ ಗುಣಗಳಿವೆ. ವಿವಿಧ ಗುಣಗಳಾನುಸಾರವಾಗಿ "ವೇದ ಕರ್ಮಕಾಂಡವನ್ನು ಹೇಳುತ್ತದೆ" ಎಂದು ಅನೇಕ ಜನರು ಅಭಿಪ್ರಾಯಪಡುತ್ತಾರೆ. ಆದರೆ ಕರ್ಮಮಾಡೆಂದು ವೇದ ಹೇಳುವಾಗ ಅದರ ಉದ್ದೇಶ ಕರ್ಮದಿಂದ ಬಿಡುಗಡೆ ಹೊಂದಬೇಕೆಂಬುದೇ ಆಗಿದೆ. ಕರ್ಮದಿಂದ ಬಿಡುಗಡೆ ಹೊಂದಬಯಸುವುದಾದರೆ ಬಹಳಷ್ಟು ಕರ್ಮ ಮಾಡಿರಿ. ಕರ್ಮದಿಂದ ಬಿಡುಗಡೆ ಹೊಂದುವುದಕ್ಕಾಗಿ ವೇದವು ಕರ್ಮದ ಬಗ್ಗೆ ವಿಧಿಗಳನ್ನು ಗೊತ್ತುಮಾಡುತ್ತದೆ. ಇದು ಯಾವರೀತಿ? ಹೋಮಿಯೋಪತಿ ಔಷಧದ ರೀತಿಯಲ್ಲಿ.

ರೋಗದ ಮುಕ್ತಿಗಾಗಿ ಹೋಮಿಯೋಪತಿ ಔಷಧಿಯು ಮೊದಲು ರೋಗವನ್ನು ಉಲ್ಬಣಿಸುತ್ತದೆ. ಅದೇ ರೀತಿ ಕರ್ಮದಿಂದ ಬಿಡುಗಡೆ ಹೊಂದುವುದಕ್ಕಾಗಿ ಕರ್ಮವನ್ನು ಹೆಚ್ಚಿಸಿಕೊಳ್ಳಲು ವೇದ ಹೇಳುತ್ತದೆ. ಆದರೆ ಇನ್ನು ಕೆಲವು ಔಷಧಿಗಳು ರೋಗ ಮುಕ್ತಿಗಾಗಿ ರೋಗವನ್ನು ಕಡಿಮೆಮಾಡುವ ಕೆಲಸವನ್ನು ಮಾಡುತ್ತವೆ ಅದೇ ರೀತಿ ಉಪನಿಷತ್ತು ಕರ್ಮದಿಂದ ಮುಕ್ತಿ ಹೊಂದುವುದಕ್ಕಾಗಿ ಕರ್ಮವನ್ನು ಕಡಿಮೆಮಾಡಬೇಕೆಂದು ಹೇಳುತ್ತದೆ. ವೇದದ ಪದ್ಧತಿ ಇದಕ್ಕೆ ವಿರುದ್ಧವಾದುದಾಗಿದೆ. ಇದು ವೇದದ ತನ್ನದೇ ಆದ ಕುಶಲತೆ.

ಹೆಚ್ಚು ಕರ್ಮಮಾಡಿ ಕರ್ಮದಿಂದ ಮುಕ್ತಿಯನ್ನು ಪಡೆಯುವುದೇ ಒಂದು ಪ್ರಕ್ರಿಯೆಯಾಗಿದೆ. ಹೋಮಿಯೋಪತಿ ಪದ್ಧತಿ ಔಷಧಿಯೊಂದಿಗೆ ಪಥ್ಯವನ್ನೂ ಹೇಳುತ್ತದೆ. ಅದೇ ರೀತಿ ವೇದವು ಕೂಡ ಕರ್ಮದ ಬಗ್ಗೆ ಹೇಳುತ್ತದೆ. ವೇದದ ಪಥ್ಯ ಅನಾಸಕ್ತಿ. ಕರ್ಮದ ಫಲದ ವಿಷಯದಲ್ಲಿ ಅನಾಸಕ್ತರಾಗಿರುವುದು ಮತ್ತು ಕರ್ಮದ ಸಂಬಂಧವನ್ನು ಈಶ್ವರನೊಂದಿಗೆ ಜೋಡಿಸುವುದು ಇವೆರಡೂ ಪಥ್ಯದ ಪಾಲನೆ ಮಾಡುತ್ತವೆ, ಅಂದರೆ ವೇದೋಕ್ತವಾದ ಕರ್ಮ ಮಾಡುತ್ತಿದ್ದರೂ ಕೂಡ ನೈಷ್ಕರ್ಮ್ಯ ಸಿದ್ಧಿ ದೊರೆಯುತ್ತದೆ.

ವೇದದಲ್ಲಿಯ ವಾಕ್ಯಗಳಲ್ಲಿ ಕರ್ಮಗಳ ಫಲವನ್ನು ತಿಳಿಸಲಾಗಿದೆ. ಅಂದ ಮೇಲೆ ಫಲ ಬಿಡಬೇಕೆಂಬುದು ಹೇಗೆ? ವೇದದಲ್ಲಿ ಬಂದಿರುವಂಥ ಫಲಶ್ರುತಿಗಳು ರೋಚನಾರ್ಥವಾಗಿವೆ. ಅಂದರೆ ಕರ್ಮದಲ್ಲಿ ರುಚಿ ಹುಟ್ಟಿಸುವುದಕ್ಕಾಗಿ. ಸೂರದಾಸ್‌ರು ಒಂದು ಭಜನೆ ಹಾಡಿದ್ದಾರೆ– 'ಮೈಯ ಕಬಹೂ ಭಡೆಗಿ ಚೋಟಿ?'– ಕೃಷ್ಣ ಹಾಲು ಕುಡಿಯುತ್ತಿರಲ್ಲಿಲ್ಲ ತಾಯಿ ಯಶೋಧೆ ಒತ್ತಾಯ ಮಾಡುತ್ತಿದ್ದಳು, ಆಗ ತಾಯಿಯನ್ನು ಕೃಷ್ಣ ಕೇಳಿದ, 'ಅಮ್ಮ, ಹಾಲು ಕುಡಿಯುವುದರಿಂದ ಏನಾಗುತ್ತದೆ?' ಅವಳೆಂದಳು–'ನಿನ್ನ ಜುಟ್ಟು ಬೆಳೆಯುವುದು' ಹೀಗೆ ಸೂರದಾಸರು ವಿನೋದ ಮಾಡಿದ್ದಾರೆ. ಆದರೆ ವೇದದ ಯುಕ್ತಿ ಮಿಥ್ಯವಲ್ಲ. ನಿಮಗೆ ಕರ್ಮದ ಪ್ರೇರಣೆ ದೊರೆಯಲೆಂದೆ ವೇದದಲ್ಲಿ ಕರ್ಮದ ಫಲಶೃತಿಯನ್ನು ಹೇಳಲಾಗಿದೆ.

ಬೆಳಿಗ್ಗೆ–ಸಂಜೆ ಸಂಧ್ಯಾವಂದನೆ ಮಾಡಬೇಕೆಂದು ಮನು ಸ್ಮೃತಿಯಲ್ಲಿ ಹೇಳಲಾಗಿದೆ. ಇದರ ಫಲಶೃತಿ "ದೀರ್ಘಾಯು" ಎಂದು ಹೇಳಲಾಗಿದೆ. ಈ ಫಲಶ್ರುತಿ ಮಿಥ್ಯೆಯಲ್ಲ. ದೀರ್ಘ ಜೀವಿಗಳಾಗುತ್ತೇವೆಂಬ ಮಾತು ನಿಜ. ಸಂಧ್ಯಾವಂದನೆ ಮಾಡುವುದಕ್ಕಾಗಿ ಪ್ರಾತಃಕಾಲದಲ್ಲಿ ಬೇಗನೆ ಏಳಬೇಕಾಗುತ್ತದೆ ಮತ್ತು ಬೇಗ ಏಳುವುದಕ್ಕಾಗಿ ಬೇಗ ಮಲಗಬೇಕಾಗಬಹುದು. ಸಂಧ್ಯಾ ಮಾಡುವಾಗು ಚಿತ್ತವನ್ನು ಏಕಾಗ್ರವಾಡಬೇಕಾಗುವುದು, ವಿಕಾರಗಳನ್ನು ದೂರ ಮಾಡಬೇಕಾಗುವುದು. ಇದೆಲ್ಲವನ್ನೂ ಮಾಡಿದಲ್ಲಿ ನಿಸ್ಸಂದೇಹವಾಗಿ ಆರೋಗ್ಯ

ಹೆಚ್ಚುವುದು. ಆದ್ದರಿಂದ ಈ ವಾಕ್ಯ ಮಿಥ್ಯೆಯಾಗಲಾರದು, ಇದು ಸರಿ. ದೀರ್ಘ ಜೀವಿಯಾಗುವುದಕ್ಕಾಗಿ ಎರಡನೆಯ ಪ್ರಕಾರದ ಅನೇಕ ಕಾರಣಗಳೂ ಇರಲು ಸಾಧ್ಯ. ಆದರೆ ಸಂಧ್ಯಾ ಕೂಡಾ ಒಂದು ಕಾರಣ. ಅಲ್ಲದೆ, ಭಗವಂತನನ್ನು ಧ್ಯಾನಿಸುವುದು ಕೂಡ ಸಂಧ್ಯಾವಂದನೆಯ ಉದ್ದೇಶವಾಗಿದೆ.

ಸಂಧ್ಯಾ=ಉಪಾಸನೆ, ವೈದಿಕ ಕಾಲದಿಂದಲೇ ನಡೆದುಕೊಂಡು ಬಂದಿದೆ. ಸಂಧ್ಯಾ-ಉಪಾಸನೆಯನ್ನು ಸಂಧಿಕಾಲದಲ್ಲಿ ಮಾಡಬೇಕಾಗುತ್ತದೆ. ಮುಖ್ಯವಾಗಿ ಸೂರ್ಯನೊಂದಿಗೆ ಅದರ ಸಂಬಂಧ ಸೇರಿದೆ. ಸೂರ್ಯನಾರಾಯಣ ಭಗವಂತನ ಪ್ರತೀಕ. **ಸೂರ್ಯ ಆತ್ಮ ಜಗತಸ್ಥ ಸ್ಥು ಶ ಶ್ಚ**- ಸೂರ್ಯ ಸ್ಥಾವರ ಜಂಗಮದ ಆತ್ಮ (೧.೧೧೮.೧೨). ಸ್ವಲ್ಪ ಸಮಯ ಧ್ಯಾನ ಮಾಡಿದ ನಂತರ ಉಳಿದ ಸಮಯ ಏನು ಮಾಡಬೇಕು? ಕಲಿಯುಗದಲ್ಲಿ ನಿತ್ಯ ಸಂಧ್ಯಾವನ್ನು ಸಾಧಿಸಬೇಕೆಂದು ಹೇಳಲಾಗಿದೆ. ಹೊರಗಿನ ಆದಿತ್ಯನಿಗಂತೂ ಉದಯಾಸ್ತವಾಗುತ್ತದೆ. ಆದರೆ ಒಳಗಿನ ಚೈತನ್ಯ ಆದಿತ್ಯನಿಗೆ ಹೀಗೆ ಇಲ್ಲ. ಒಂದು ಸಲ ಅಜ್ಞಾನದ ಅಂಧಕಾರ ಲೋಪವಾದ ಮೇಲೆ ಜ್ಞಾನದ ಚೈತನ್ಯ ರೂಪಿ ಪರಮಾತ್ಮನ ಲೋಪವಾಗುವುದಿಲ್ಲ. ಉದಯಾಸ್ತವೇ ಇಲ್ಲವೆಂದಮೇಲೆ ಯಾವ ಸಮಯದಲ್ಲಿ ಸಂಧ್ಯೋಪಾಸನೆ ಮಾಡುವಿರಿ? ಆದ್ದರಿಂದ ಬೇಕು ನಿತ್ಯ ಸಂಧ್ಯಾ.

ಸಾರಾಂಶ, ಕರ್ಮವನ್ನು ಮಾಡುವುದಕ್ಕೆ ಹೇಳಿರುವ ವೇದದ ಉದ್ದೇಶ ಪರಮಾರ್ಥ ದರ್ಶನವೇ ಆಗಿದೆ. ಆ ಬಗ್ಗೆ ಜನರಲ್ಲಿ ಅಭಿರುಚಿ ಉಂಟಾಗಬೇಕೆಂದು ಫಲಶ್ರುತಿಯನ್ನು ಹೇಳಿದೆ. ಆದರೆ ಮನುಷ್ಯ ಒಂದು ವೇಳೆ ಸಂಧ್ಯಾಕರ್ಮವನ್ನು ಮಾಡುವ ಸಮಯದಲ್ಲಿ ಫಲಶ್ರುತಿಗೆ ಅಂಟಿಕೊಂಡು ಬಿಟ್ಟರೆ ಅವನಿಗೆ ಆರೋಗ್ಯ ದೊರೆತರೂ ಪರಮಾತ್ಮನ ದರ್ಶನವಾಗಲಾರದು. ಒಂದು ವೇಳೆ ಅವನು ಪರಮಾತ್ಮ ದರ್ಶನದ ದೃಷ್ಟಿಯನ್ನೇ ಇಟ್ಟುಕೊಂಡರೆ ಅವನಿಗೆ ಪರಮಾತ್ಮನ ದರ್ಶನವಾಗುತ್ತದಷ್ಟೆ ಅಲ್ಲ ಆರೋಗ್ಯ ಕೂಡ ದೊರೆಯುತ್ತದೆ. ಈಗ ಮನುಷ್ಯ ಏನು ಮಾಡಬೇಕೆಂದು ಅವನ ಬುದ್ಧಿಗೆ ಸಂಬಂಧಿಸಿದ್ದು. ತಾತ್ಪರ್ಯವಿಷ್ಟೆ, ವೇದದಲ್ಲಿ ಯಾವ ಅನೇಕ ಕರ್ಮಗಳನ್ನು ಮಾಡುವ ವಿಧಾನವಿದೆಯೋ ಅದು ಕರ್ಮದಿಂದ ಮುಕ್ತಿಯನ್ನು ಹೊಂದುವುದಕ್ಕಾಗಿಯೆ ಇದೆ. ಅಭಿರುಚಿಯನ್ನು ಬೆಳೆಸುವುದಕ್ಕಾಗಿ ಮಾತ್ರ ಫಲಶ್ರುತಿಯನ್ನು ಹೇಳಲಾಗಿದೆ. ಭಗವಂತನ ದರ್ಶನದ ಲಾಲಸೆ ಹೆಚ್ಚಾಗಲಿ, ಭಗವಂತನ ಸಾಕ್ಷಾತ್ಕಾರದ ಇಚ್ಛೆಯಾಗಲಿ ಎಂಬೀ ಉದ್ದೇಶಕ್ಕಾಗಿ ಮಾತ್ರ ಇದನ್ನು ಹೇಳಲಾಗಿದೆ. ಆದ್ದರಿಂದ ವೇದವು ಕರ್ಮಕಾಂಡಿಯಾಗಿದೆಯೆಂದು ತಿಳಿಯಕೂಡದು.

(ಮುಂದುವರೆಯುವುದು)

ಜನಪದ ವ್ಯಕ್ತಿ.

ಭೋಗಿಗಳ ಮಧ್ಯೆ ಚಲಿಸುತ್ತಿರುವ ಓರ್ವ ಯೋಗಿ

-ವಿಶ್ವೇಶ್ವರಭಟ್

ಅಂದು 'ನಗ್ನಸತ್ಯ'ಗಳ ಕ್ರಾಂತಿಕಾರಿ ಸಂತ ಮುನಿಶ್ರೀ ತರುಣ ಸಾಗರ ಅವರು ತಂಗಿರುವ ಮುನಿತಾಣಕ್ಕೆ ಹೋದರೆ ಸಾವಿರಾರು ಜನ ಸೇರಿದ್ದರು. ಅವರಿರುವಲ್ಲಿ ಜನ, ಒಂದಷ್ಟು ಚಟುವಟಿಕೆ, ಬಿರುಸಿಗೆ ಕೊರತೆಯಿರುವುದಿಲ್ಲ. ಹಾಗೆಯೇ ಯಥೇಚ್ಛ ಸದ್ವಿಚಾರಗಳಿಗೂ. ಬೆಳಗಿನ ತಮ್ಮ ಕಟು ಪ್ರವಚನ ಮುಗಿಸಿ ವಿಶ್ರಾಂತರಾಗಿ ಕುಳಿತಿದ್ದರು. ಹುಟ್ಟುಡುಗೆಯಲ್ಲೇ ಸದಾ ಕಂಗೊಳಿಸುವ ಮುನಿಶ್ರೀಯವರನ್ನು ಅವರ ಭಕ್ತಗಣ ಕರೆಯುವುದು 'ಮಹಾರಾಜ್' ಎಂದೇ. ಕಿರೀಟ ತೊಟ್ಟು ಝುಗಝುಗ ಪೋಷಾಕು ತೊಟ್ಟವನೇ ಮಹಾರಾಜ ಎಂಬ ಕಲ್ಪನೆ ಅನೇಕರದು. ಏನೂ ತೊಡದೇ ಹಾಗೆ ಕರೆಯಿಸಿಕೊಳ್ಳಬಹುದು ಎಂದು ತೋರಿಸಿಕೊಟ್ಟವರು ಅವರು. ಬೆಂಗಳೂರಿನಂಥ ಊರಲ್ಲಿ ಪ್ರವಚನ, ಭಾಷಣಗಳಿಗೆ ಬೆಳಗ್ಗೆ ಎಂಟು-ಒಂಭತ್ತು ಗಂಟೆಗೆ ಜನ ಸೇರುವುದಿಲ್ಲ. (ಸಾಯಂಕಾಲವೂ ಸೇರುತ್ತಾರೆಂಬ ಗ್ಯಾರಂಟಿಯಿಲ್ಲ) ಮುನಿಶ್ರೀಯರ ಪ್ರವಚನವಿದೆಯೆಂದರೆ ಏನಿಲ್ಲವೆಂದರೂ ಎಂಟು-ಹತ್ತು ಸಾವಿರ ಮಂದಿ ಪ್ರತಿ ದಿನ ಸೇರುತ್ತಾರೆ. ಶನಿವಾರ, ಭಾನುವಾರವಂತೂ ಮೂರ್ನಾಲ್ಕು ಪಟ್ಟು ಜಾಸ್ತಿ.

ಮುನಿಶ್ರೀ ಮಾತಾಡುವುದನ್ನು ಕೇಳಬೇಕು. ಸರ ಪಟಾಕಿಗೆ ಬೆಂಕಿ ಕೊಟ್ಟಂತೆ. ಮಾತಿನ ಆರ್ಭಟವೊಂದೇ ಅಲ್ಲ. ವಿಚಾರಗಳ ಹೊಳಪು, ಝುಗಮಗಿಸುತ್ತದೆ. ಮುನಿಶ್ರೀಯವರ ಮಾತಿನ ವೇಗ ನಿಮ್ಮನ್ನು ಹಿಂದಕ್ಕೆ ಹಾಕಿಬಿಡುವುದಿಲ್ಲ. ಕೈಹಿಡಿದುಕೊಂಡೇ ಓಡಿಸಿಕೊಂಡು ಹೋಗುತ್ತದೆ. ಓಡಿಸಿ ಓಡಿಸಿ ಸುಸ್ತು ಹೊಡೆಸುವುದಿಲ್ಲ. ಓಡಿ ಬಂದವನಿಗೆ ನೆರಳಿನಂತೆ ತಂಪೆರೆಯುತ್ತದೆ. ಹೆಸರಿಗೆ ತಕ್ಕಂತೆ ಅದು ಕಟು ಪ್ರವಚನವೇ. ಸಂತನೊಬ್ಬ ನಿರ್ಭಯದಿಂದ, ನಿರ್ಭಿಡೆಯಿಂದ, ಜನರನ್ನು ಎಬ್ಬಿಸಿ ನಿಲ್ಲಿಸುವಂತೆ ಪ್ರವಚನ ಮಾಡುವುದಿಲ್ಲ. ಸಾಧುಗಳ ಪ್ರವಚನವೆಂದರೆ ತಿಳಿನೀರು ಹರಿದಂತೆ. ಜುಳುಜುಳು ಸಪ್ಪಳವೂ ಕೇಳಿಸದಷ್ಟು ಪ್ರಶಾಂತ. ಆದರೆ ತರುಣ ಸಾಗರ್ ಅವರು ಹಾಗಲ್ಲ. ದನಿ ಹಾಗೂ ವಿಚಾರಗಳಿಂದ ಬಿರುಗಾಳಿಯಂತೆ ಬಂದು ಮನಸ್ಸಿನೊಳಗೆ ಸುಂಟರಗಾಳಿಯನ್ನೆಬ್ಬಿಸಿ, ಅನೇಕ ಸುತ್ತು ಗಿರಕಿ ಹೊಡೆಸಿ ಸುಮ್ಮನಾಗುತ್ತಾರೆ. ಹಾಗೆಂದು ಕೇಳುಗರನ್ನು ಶಾಂತಗೊಳಿಸುವುದಿಲ್ಲ. ಅವರ ಮಾತುಗಳನ್ನು ಕೇಳಿದ ಬಳಿಕ ತಾಕಲಾಟ, ಹೊಯ್ದಾಟ, ಹೋರಾಟ ಪಟಪಟಗುಡಲಾರಂಭಿಸುತ್ತವೆ.

ಈ 'ಮಹಾರಾಜ'ನನ್ನು ಜನರೆಲ್ಲ ಕ್ರಾಂತಿಕಾರಿ ಸಂತ ಎಂದು ಕರೆಯುವುದು ಇದೇ ಕಾರಣಕ್ಕೆ. 'ಮುನಿಶ್ರೀ ನೀವ್ಯಾಕೆ ಈ ಪರಿ ಏರಿದ ದನಿಯಲ್ಲಿ ಮಾತನ್ನು ಸಿಡಿಸುತ್ತೀರಿ?' ಎಂದು ಪ್ರಶ್ನೆಯನ್ನಿಟ್ಟು ಮಾತಿಗೆ ಕುಳಿತುಕ್ಕೊಂಡೆ. ಮುನಿಶ್ರೀ ತೀರಾ 'ಶಾಂತ'ರಾಗಿ ಹೇಳಿದರು- 'ನಿಧಾನವಾಗಿ ಹೇಳಿದರೆ, ಜನ ಕತೆ ಕೇಳಿದವರಂತೆ ಕೇಳಿ ಎದ್ದು ಹೋಗುತ್ತಾರೆ. ಅದರಿಂದ ಪ್ರಯೋಜನವಾಗುವುದಿಲ್ಲ. ವಿಚಾರಗಳು ಜನರನ್ನು ಯಾವತ್ತೂ ಬಡಿದೆಬ್ಬಿಸಬೇಕು. ಜಾಗೃತಗೊಳಿಸಬೇಕು. ಕ್ರಿಯೆಗೆ ಹಚ್ಚಬೇಕು. ಇಲ್ಲದಿದ್ದರೆ ಎಷ್ಟು ಹೇಳಿ ಪ್ರಯೋಜನ ಏನು? ನನ್ನ ಮಾತನ್ನು ಕೇಳಿ ಸುಮ್ಮನೆ ಹೋಗುವುದಾದರೆ ಮಾತಾಡಿ ಲಾಭವೇನು? ಅದು ವೃಥಾ ಕಾಲಕ್ಷೇಪ ಅದಕ್ಕಾಗಿ ನಾನು ನನ್ನ ಮಾತನ್ನು ಕಟು ಪ್ರವಚನವೆಂದು ಕರೆದಿದ್ದೇನೆ. ನನ್ನ ಮಾತು ಕಟು, ಕಹಿ. ಆದರೆ ಆರೋಗ್ಯಕ್ಕೆ ಒಳ್ಳೆಯದು. ಸಮಾಜದ ಸ್ವಾಸ್ಥ್ಯಕ್ಕೆ ಇನ್ನೂ ಒಳ್ಳೆಯದು. ಅದಕ್ಕಿಂತ ಹೆಚ್ಚಾಗಿ ನಾನು ಏರಿದ ದನಿಯಲ್ಲಿ ಪ್ರವಚನ ಮಾಡುವುದರಿಂದ ಯಾರೂ ತೂಕಡಿಸುವುದಿಲ್ಲ'.

ಸದಾ ತಮ್ಮ ಹರಿತ, ಸ್ಫೋಟಕ, ಒರಿಜನಲ್ ವಿಚಾರಗಳಿಂದ ದಂಗುಬಡಿಸುವ ಅವರ ಜತೆ ಕೆಲಕಾಲ ಕಳೆದರೂ ಸಾಕು, ನಮ್ಮನ್ನು ಹೊಸ ಆಲೋಚನೆಗಳತ್ತ ತಳ್ಳಿ, ವಿಚಿತ್ರ ಅನುಭವಗಳ ಅಲೆಗಳನ್ನೆಬ್ಬಿಸಿ ಪ್ರಚೋದಿಸುತ್ತಾರೆ. ಅವರ ಕಣ್ಣು ಕಾಂತಿಯುತವಾಗಿ ಮಿನುಗುತ್ತಿದ್ದರೆ, ಕೈಗಳು ಆವೇಶದ ಗತ್ತಿನಲ್ಲಿ ಗಾಳಿಯಲ್ಲಿ ಹರಿದಾಡಲಾರಂಭಿಸುತ್ತವೆ. ಆಗ ಪ್ರವಚನ ಕಟು ಕಟು. ಒಬ್ಬ ಸಂತ ನಮ್ಮನ್ನು ಈ ಪರಿ ಕದಲಿಸಿಬಹುದಾ ಎಂದು ಅಚ್ಚರಿಯಾಗುತ್ತದೆ. ಹಾಗಂತ ಅವರೇನು ಮಹಾ ತತ್ವ, ಸಿದ್ಧಾಂತ ಬೋಧಿಸುವುದಿಲ್ಲ. ದೇವರು ದಿಂಡರ ಪ್ರವರ ಹೇಳಿ ಕಷ್ಟಕೊಡುವುದಿಲ್ಲ. ನಾವು ಗ್ರಹಿಸಿದ ನಿತ್ಯ ಬದುಕಿನಲ್ಲಿ ಆಗು ಹೋಗುವ ವಿಷಯಗಳನ್ನು ಹೊಸ ದೃಷ್ಟಿಯಿಂದ ನೋಡಿ ನೇರವಾಗಿ, ಅಪ್ರಿಯವೆನಿಸಿದರೂ ಖಾರವಾಗಿ ಹೇಳುತ್ತಾರೆ.

ಅತ್ತೆ-ಸೊಸೆ ಬಗ್ಗೆ ಮುನಿಶ್ರೀಯವರ ಮಾತುಗಳನ್ನು ಕೇಳಿಸಿಕೊಳ್ಳಿ- 'ನೀವು ಅತ್ತೆಯಾಗಿದ್ದರೆ ನಿಮ್ಮ ಸೊಸೆ ತವರಿನ ಫೋನ್ ನಂಬರೇ ಮರೆಯುವಷ್ಟು ಪ್ರೀತಿಕೊಡಿ. ನೀವು ಸೊಸೆಯಾಗಿದ್ದರೆ, ನಿಮ್ಮ ಅತ್ತೆ ತನ್ನ ಮಗಳ ಹೆಸರನ್ನೇ ಮರೆಯುವಷ್ಟು ಆದರಿಸಿ. ಅತ್ತೆ-ಸೊಸೆ ಸಂಬಂಧ ಗಂಧ ತೀಡಿದಂತಾದೀತು'. ಇಷ್ಟೇ ಮುನಿಶ್ರೀಯವರು ಹೇಳೋದು.

ಒಂದು ಪ್ರವಚನದಲ್ಲಿ ಮುನಿಶ್ರೀ ಹೇಳಿದರು: 'ಈ ಸಮಾಜದ ತರುಣರಿಗೆ ನಾನು ಹೇಳೋದು ನಾಲ್ಕೇ ನಾಲ್ಕು ಮಾತು ಅದೇನೆಂದರೆ- ನೀವು ನಿಮ್ಮ ನಾಯಿಯನ್ನು ಎಷ್ಟು ಪ್ರೀತಿಸುತ್ತೀರೋ ಅದರ ಹತ್ತನೇ ಒಂದು ಭಾಗದಷ್ಟು ಪ್ರೀತಿಯನ್ನು ವೃದ್ಧ ತಂದೆ-ತಾಯಿಗೆ ಕೊಡಿ. ಅದರಿಂದ ಅವರ ವೃದ್ಧಾಪ್ಯ

ಸುಧಾರಿಸುವುದು, ನಿಮ್ಮ ಬದುಕು ನಾಯಿಪಾಡಾಗುವುದು ತಪ್ಪುವುದು'.

ಕೆಲದಿನಗಳ ಹಿಂದೆ ಬೆಂಗಳೂರಿನ ಮುನಿವಾಸದಲ್ಲಿ ಭೇಟಿಯಾದಾಗ ಮುನಿಶ್ರೀ ತರುಣ ಸಾಗರರಾಗುವುದು ಅದೆಷ್ಟು ಕಷ್ಟದ ಕೆಲಸವೆಂಬುದು ಮನವರಿಕೆಯಾಯಿತು. ಅಂದು ಅವರು 'ಕೇಶ ಲೋಚನ'ಕ್ಕೆ ಅಣಿಯಾಗುತ್ತಿದ್ದರು. ಜೈನ ಮುನಿಗಳಾದವರಿಗೆ ಕೇಶ ಲೋಚನವೊಂದು ಕಠಿಣ ಕಟ್ಟುಪಾಡು. ಕ್ಷೌರಿಕರಿಂದ ಅವರು ತಲೆಗೂದಲನ್ನು ಕತ್ತರಿಸಿಕೊಳ್ಳುವಂತಿಲ್ಲ. ತಮ್ಮ ಕೈಯಿಂದಲೇ ಕೂದಲನ್ನು ಕತ್ತರಿಸಿಕೊಳ್ಳುತ್ತಿದ್ದರೆ, ಮುಖದಲ್ಲಿ ಮಂದಸ್ಮಿತ. ಅರ್ಧ ಗಂಟೆಯೊಳಗೆ ತಲೆ ಬೋಳುಗುಂಡು ಒಂದೊಂದು ಕೂದಲು ಕೀಳುವಾಗಲೂ ನೆರೆದ ಭಕ್ತರ ವೇದನಾಪೂರ್ಣ ಉದ್ಗಾರ. ಬಳಿಕ ಮೀಸೆ, ಗಡ್ಡದ ಕೂದಲುಗಳಿಗೂ 'ಕಿತ್ತುಕೋ ಚಳವಳಿ'. ಗಡ್ಡದಿಂದ ರಕ್ತ ಜಿನುಗುತ್ತಿದ್ದರೆ ಮುನಿಶ್ರೀಯವರು ಚಳವಳಿ ಮುಂದುವರಿಸಿದ್ದರು.

ಮುನಿಶ್ರೀಯವರು ವಾಹನವೇರುವುದಿಲ್ಲ. ಕಾರು, ವಿಮಾನ ಹತ್ತಿಲ್ಲ, ಏರಿಲ್ಲ. ಅದೆಷ್ಟೇ ದೂರವಿರಲಿ ಕಾಲ್ನಡಿಗೆಯಲ್ಲೇ ಪಯಣ. ಗುಜರಾತ್, ಮಹಾರಾಷ್ಟ್ರದಿಂದ ಅವರು ಕರ್ನಾಟಕ ಪ್ರವೇಶಿಸಿದ್ದು ನಡಿಗೆಯಲ್ಲಿಯೇ. ಇಲ್ಲಿಂದ ಮುಂದಿನ ಪಯಣ ಚೆನ್ನೈಗೆ, ಅಲ್ಲಿಗೂ ಹಾಗೇ ಹೋಗಬೇಕು. ದಿನಕ್ಕೆ ೩೦-೪೦ ಕಿ.ಮೀ. ನಡಿಗೆ ಅವರಿಗೆ ಸಲೀಸು. ಬರಿಗಾಲಲ್ಲಿ ಅವರು ಹೆಜ್ಜೆ ಹಾಕಲಾರಂಭಿಸಿದರೆ ಅವರನ್ನು ಹಿಂಬಾಲಿಸುವವರು ಸುಸ್ತು. ಮುನಿಶ್ರೀಯವರ ಆಹಾರವೂ ಕಟ್ಟುನಿಟ್ಟು, ಬೆಳಿಗ್ಗೆ ಹತ್ತರಿಂದ ಹನ್ನೊಂದರೊಳಗೆ ಐವರು ಬಡಿಸುವ ಮುಷ್ಟಿ ಭಿಕ್ಷಾನ್ನವೇ ಭೋಜನ. ತಂಬಿಗೆ ನೀರು ಕುಡಿದರೆ ಅಂದಿನ ಆಹಾರ ಸೇವನೆಗೆ ಪೂರ್ಣವಿರಾಮ. ಮರುದಿನ ಇದೇ ಸಮಯದ ತನಕ ಏನನ್ನೂ ಸೇವಿಸುವಂತಿಲ್ಲ. ಒಂದು ತೊಟ್ಟು ನೀರನ್ನೂ. ಒಂದು ವೇಳೆ ಏನೋ ಕಾರಣದಿಂದ ಬೆಳಗಿನ ಆ ವೇಳೆಗೆ ಆಹಾರ ಸೇವಿಸಲಾಗಲಿಲ್ಲವೆನ್ನಿ. ಆ ಇಡೀ ದಿನ ಆಹಾರ ಇಲ್ಲವೇ ಇಲ್ಲ. ಯಾವುದೇ ಕಾರಣಕ್ಕೂ ಈ ನಿಯಮ ಸಡಿಲಿಸುವಂತಿಲ್ಲ. ಇನ್ನು ಇಡೀ ಮೈ ಮೇಲೆ ಬಟ್ಟೆಯೆಂಬುದೂ ಇಲ್ಲ. ಮೈಗೇ ಇಲ್ಲದಿದ್ದ ಮೇಲೆ ಹಾಸಿಕೊಳ್ಳಲು ಏಕೆ, ಹೊದೆದುಕೊಳ್ಳಲು ಏಕೆ? ತುಂಡು ಚಾಪೆ, ಇಲ್ಲದಿದ್ದರೆ ಬರೀ ನೆಲವೇ ಪ್ರಶಸ್ತ. ಇನ್ನುಳಿದಂತೆ ಜೀವನದ ಎಲ್ಲ ಐಷಾರಾಮಗಳೂ ವರ್ಜ್ಯ. ಅದಕ್ಕೇ ಹೇಳಿದ್ದು ಮುನಿಶ್ರೀ ತರುಣ ಸಾಗರರಾಗುವುದು ಬಹಳ ಕಷ್ಟ ಕಠಿಣ. ನಿಶ್ಚಿತ ಉದ್ದೇಶಕ್ಕಾಗಿ ಈ ಹಠ, ಈ ಹೋರಾಟ.

ಪವನಕುಮಾರ ಜೈನ ಪೂರ್ವಾಶ್ರಮದ ಹೆಸರು. ಮಧ್ಯ ಪ್ರದೇಶದ ದಮೋಹ ಜಿಲ್ಲೆಯ ಗುಹಂಚಿ ಗ್ರಾಮದಲ್ಲಿ ಹುಟ್ಟಿದ್ದು. ತಂದೆ ಪ್ರತಾಪಚಂದ್ರ ಜೈನ. ತಾಯಿ ಶಾಂತಿಬಾಯಿ ಜೈನ. ಈಗ ಮುನಿಶ್ರೀಗಳಿಗೆ ಮೂವತ್ತೊಂಬತ್ತು

ವರ್ಷ ಪೂರ್ಣ. ೧೯೮೦ರಲ್ಲಿ ಮುನಿದೀಕ್ಷೆ ತೆಗೆದುಕೊಂಡಾಗ ಕೇವಲ ಹದಿಮೂರು ವರ್ಷ. ಆಚಾರ್ಯ ಕುಂದಕುಂದರ ನಂತರ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಹದಿಮೂರನೇ ವಯಸ್ಸಿನಲ್ಲಿ ಜೈನ ಸನ್ಯಾಸ ಧಾರಣಮಾಡಿದ ಮೊದಲ ಯೋಗಿ ಎಂಬ ಅಗ್ಗಳಿಕೆ.

ದಿಲ್ಲಿಯ ಕೆಂಪು ಕೋಟೆಯಲ್ಲಿ ನಿಂತು ದೇಶದ ಪ್ರಧಾನಿ ಮಾತ್ರ ಮಾತಾಡಬಹುದು. ಮುನಿಶ್ರೀಯವರ ಮಾತಿನ ಓಘಕ್ಕೆ ಯಾರು ಇಲ್ಲ ಅಂತಾರೆ? ಕೆಂಪು ಕೋಟೆಯಲ್ಲಿ ನಿಂತು ಭಾಷಣ ಮಾಡಲು ಅವಕಾಶ ಪಡೆದ ರಾಷ್ಟ್ರದ ಪ್ರಥಮ ಸಂತ. ಆಗ ಅವರಿಗೆ ಮೂವತ್ಮೂರು ವರ್ಷ. ಮುನಿಶ್ರೀಯವರ ವಿಚಾರ, ಸಿದ್ಧಾಂತಕ್ಕೆ ಅಪಾರ ಮೆಚ್ಚುಗೆ ಸೂಚಿಸಿದ ಸೇನಾ ಅಧಿಕಾರಿಗಳು ಭಾರತೀಯ ಯೋಧರನ್ನುದ್ದೇಶಿಸಿ ಮಾತಾಡುವಂತೆ ಕೋರಿದರು. ಈ ಸದವಕಾಶ ಪಡೆದ ಮೊದಲ ಸಂತರೂ ಮುನಿಶ್ರೀಗಳೆ. ಮಹಾವೀರನ ತತ್ವಗಳ ಬಗ್ಗೆ ಮುನಿಶ್ರೀಯವರ ಅಧ್ಯಯನ, ತಿಳುವಳಿಕೆ ಅಗಾಧ. ಝೀ ಟಿ.ವಿ ಯಲ್ಲಿ ಅನೇಕ ವರ್ಷಗಳ ಕಾಲ ಪ್ರತಿನಿತ್ಯ ಅವರು ಮಹಾವೀರ-ವಾಣಿಯನ್ನು ವಿಸ್ತಾರವಾಗಿ ವ್ಯಾಖ್ಯಾನಿಸಿದ್ದಾರೆ. ಈ ಕಾರ್ಯಕ್ರಮ ೧೨೨ ದೇಶಗಳಲ್ಲಿ ಮರುಪ್ರಸಾರಗೊಂಡಿದ್ದು ಸಾಮಾನ್ಯ ಸಂಗತಿಯಲ್ಲ.

ಈ ಶತಮಾನದ ಮೊದಲ ದಿನಕ್ಕೆ ಮುನಿಶ್ರೀಯವರು ಕೈಗೊಂಡ ಕೈಂಕರ್ಯ ಅಸಾಧಾರಣವಾದುದು. ಮಾಂಸ ನಿರ್ಯಾತ ಹಾಗೂ ಪಶುಹತ್ಯೆ ವಿರುದ್ಧ ರಾಷ್ಟ್ರೀಯ ಅಹಿಂಸಾತ್ಮಕ ಆಂದೋಲನದ ನೇತೃತ್ವ ವಹಿಸಲು ನಿರ್ಧರಿಸಿದ ಮುನಿಶ್ರೀಯವರು ಕೆಂಪುಕೋಟೆಯಿಂದ 'ಅಹಿಂಸಾ ಮಹಾಕುಂಭ' ಆರಂಭಿಸಿದರು. ದೇಶಪ್ರೇಮ, ಅಹಿಂಸೆ, ಶಾಂತಿ, ತ್ಯಾಗ, ಆಧ್ಯಾತ್ಮ ಹಾಗೂ ಸಾಮಾಜಿಕ ಸಾಮರಸ್ಯಕ್ಕಾಗಿ ಭಾರತ ಭ್ರಮಣ ಯಾತ್ರೆಯನ್ನು ಆರಂಭಿಸಿದರು. ಇದರನ್ವಯ ಒಂದೊಂದು ವರ್ಷ ಒಂದೊಂದು ರಾಜ್ಯದಲ್ಲಿ ಪ್ರವಾಸ. ಹರಿಯಾಣ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ ಮುಗಿಸಿ ಕಳೆದ ಒಂದು ವರ್ಷದಿಂದ ಕರ್ನಾಟಕದಲ್ಲಿದ್ದಾರೆ. ಮುಂದಿನ ಸ್ಟಾಪ್ ತಮಿಳುನಾಡು.

ಒಂದು ರಾಜ್ಯದಲ್ಲಿ ಒಂದು ವರ್ಷದತನಕ ಕದಲುವುದಿಲ್ಲ. ಕರ್ನಾಟಕದಲ್ಲಿ ಮುನಿಶ್ರೀಯವರು ಬಿಜಾಪುರ, ಬೆಳಗಾವಿ, ಹುಬ್ಬಳ್ಳಿ, ದಾವಣಗೆರೆ, ಹೊಸದುರ್ಗ, ಶ್ರವಣಬೆಳಗೊಳ, ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರಿನಲ್ಲಿ ತಮ್ಮ ಕಂಠೋಕ್ತಿ ಪ್ರವಚನ ಮಾಡಿದ್ದಾರೆ.

ಮುನಿಶ್ರೀ ಒಳ್ಳೆಯ ಲೇಖಕರೂ ಹೌದು. ತಮ್ಮ ಕಟು ಪ್ರವಚನದಲ್ಲಿ ಹೇಳಿದ್ದರ ಹೊರತಾಗಿ ಬೇರೆ ಅನೇಕ ವಿಚಾರಗಳನ್ನು ಬರೆದು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಇಲ್ಲಿಯ ತನಕ ಮುನಿಶ್ರೀಯವರು ಮೂರು ಡಜನ್ ಪುಸ್ತಕಗಳನ್ನು

ಬರೆದಿದ್ದು ಅವುಗಳ ಹತ್ತು ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಮಹಾವೀರ ವಾಣಿಯ ಪ್ರಸಾರಕ್ಕಾಗಿ ತಮ್ಮ ಬದುಕು ಸಮರ್ಪಿತವೆಂದು ಹೇಳುವ ಮುನಿಶ್ರೀ, ಸಾರ್ಥಕ ಜೀವನ ಸಾಗಿಸುವ ಬಗೆ ಎಂತು ಎಂಬುದನ್ನೂ ಹೇಳುತ್ತಾರೆ.

ಮುನಿಶ್ರೀಯವರು ತಮ್ಮ ಮಾತಿನಲ್ಲಿ ಯಾರಿಗೂ ರಿಯಾಯಿತಿ ತೋರುವುದಿಲ್ಲ. ಮಾತು, ಪ್ರವಚನಗಳಿಂದಲೇ ಬದಲಾವಣೆ ತರಲು ಸಾಧ್ಯವಾ ಅಂತ ಕೇಳಿದರೆ, 'ಯಾಕಾಗುವುದಿಲ್ಲ, ಖಂಡಿತ ಸಾಧ್ಯ. ಆದರೆ ನಾವು ಯಾರಿಗೆ ಪ್ರವಚನ ನೀಡುತ್ತೇವೆ ಎಂಬುದೂ ಮುಖ್ಯ. ಇಂದು ಸಂತರು, ಮುನಿಗಳು ತಮ್ಮ ಪ್ರವಚನವನ್ನು ಸಾಮಾನ್ಯ ಜನರೆದುರು ಮಾಡುವುದರ ಬದಲಾಗಿ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಾಡಬೇಕು. ಯಾಕೆಂದರೆ ಭಯಾನಕ ಜನರು ಅಲ್ಲಿದ್ದಾರೆ. ಈ ದೇಶದಲ್ಲಿರುವ ೧೦-೧೫ ಸಾವಿರ ರಾಜಕಾರಣಿಗಳು ಸುಧಾರಿಸಿದರೆ ನೂರು ಕೋಟಿ ಜನರ ಜೀವನ ರಾತ್ರಿ ಬೆಳಗಾಗುವುದರೊಳಗೆ ಸುಧಾರಿಸುತ್ತದೆ' ಎಂದು ಹೇಳುತ್ತಾರೆ. ಅದಕ್ಕಾಗಿ ಮುನಿಶ್ರೀಯವರು ತಮ್ಮ ಪ್ರವಚನದ ಪುಸ್ತಕಗಳಿಗೆ 'ಕಹಿಮಾತ್ರೆಗಳು' ಎಂದು ಹೆಸರಿಟಿದ್ದಾರೆ. 'ಸಂತರು, ವೈದ್ಯರು, ದಾರ್ಶನಿಕರು ಕಹಿ ಮಾತುಗಳನ್ನೇ ಹೇಳಬೇಕು. ದುರ್ದೈವವೆಂದರೆ ಈ ಮೂವರು ಸಿಹಿ ಮಾತುಗಳನ್ನೇ ಹೇಳುತ್ತಾರೆ' ಎಂದೆನ್ನುವ ಮುನಿಶ್ರೀಗಳು ತಮ್ಮ ಖಡಾಖಡಿ ಮಾತುಗಳಿಂದ ಬೇರೆಯವರಿಗೆ ಬೇಸರವಾದರೂ ಪರವಾಗಿಲ್ಲ. ಹೇಳಬೇಕಾದ ಮಾತನ್ನು ನುಂಗುವುದಿಲ್ಲ. ದಾಕ್ಷಿಣ್ಯ ತೋರುವುದಿಲ್ಲ. ದಿನನಿತ್ಯ ನಾವೆಲ್ಲ ಎದುರಿಸುವ ಸಮಸ್ಯೆಗಳಿಗೆ ತಮ್ಮ 'ಕಹಿಮಾತ್ರೆ' ಕೊಟ್ಟು ಸಮಾಧಾನ ಪಡಿಸುತ್ತಾರೆ.

ನಮಗೆಲ್ಲ ಮುನಿಶ್ರೀಯವರು ಹೇಳದೇ ಇರುವ ಒಂದು ಪ್ರವಚನವೆಂದರೆ ಅವರ ಜೀವನ ಶೈಲಿ. ಅವರು ನಿತ್ಯ ಆಚರಿಸುವ ಜೀವನ ಪದ್ಧತಿ, ಹಠ, ಶ್ರದ್ಧೆ, ಕಾಳಜಿಯನ್ನು ದೂರ ನಿಂತು ಗಮನಿಸಿದರೆ, ಅದನ್ನೇ ಮನಸ್ಸಿನಲ್ಲಿ ಧೇನಿಸಿದರೆ ಸಾಕು ಅದೇ ಒಂದು ಜೀವನ ಪಾಠ! ಪ್ರವಚನದಲ್ಲಿ ಹೇಳುವುದಕ್ಕಿಂತ ನೂರು ಪಟ್ಟು ಹೆಚ್ಚಿನ ಕಟು ಸಂದೇಶವನ್ನು ತಮ್ಮ ಆಚರಣೆ, ಜೀವನ ಶೈಲಿಯಿಂದ ನಮಗೆ ಕೊಡುತ್ತಾರೆಂದು ನನಗೆ ಅನೇಕ ಸಲ ಅನಿಸಿದೆ. ಜೀವನವೇ ಸಂದೇಶ ಅಂತಾರಲ್ಲ ಹಾಗೆ ತಾನೆಲ್ಲ ಹಿಂಸೆ ಅನುಭವಿಸಿಕೊಂಡು, ಅದನ್ನು ನಗುತ್ತಾ ಸಹಿಸಿಕೊಂಡು ಇಡೀ ಜಗತ್ತಿಗೆ ಅಹಿಂಸೆಯ ಪರಮ ಸಂದೇಶ ಭೋಧಿಸುತ್ತಿರುವ ಈ ಪರಮ ಸಂತನಿಗೆ ಮನದಲ್ಲಿಯೇ ವಂದಿಸಿ ಮೇಲೆದ್ದಾಗ ಕಹಿ ಮಾತ್ರೆಗಳು ಕೆಲಸ ಮಾಡಲಾರಂಭಿಸಿದ್ದವು.

(ಸಾಭಾರ : ವಿಜಯ ಕರ್ನಾಟಕ)

***

ಭಾರತ–ಪಾಕ್ ಸ್ನೇಹಕ್ಕಾಗಿ ಶಾಸ್ತ್ರಿಯವರ ಕೊಡುಗೆ

– ಬಿ.ಆರ್. ಪ್ರಾಣೇಶರಾವ್

[ಸ್ವತಂತ್ರ ಭಾರತದ ಎರಡನೆ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರ ೪೧ನೆ ಪುಣ್ಯ ತಿಥಿಯನ್ನು ಕಳೆದ ಜನವರಿ ೧೧ರಂದು ನಿಶ್ಶಬ್ದವಾಗಿ ಆಚರಿಸಲಾಯಿತು. ಭಾರತ–ಪಾಕ್ ಮಧ್ಯೆ ಶಾಂತಿ ಏರ್ಪಡಿಸುವ ಪ್ರಯತ್ನ ಇಂದಿಗೂ ನಡೆಯುತ್ತಿದೆ. ಶಾಸ್ತ್ರಿಯವರು ಈ ನಿಟ್ಟಿನಲ್ಲಿ ೧೯೬೬ರಲ್ಲಿ ಧೀರ ಪ್ರಯತ್ನವೊಂದನ್ನು ಮಾಡಿ ಅಮರರಾದರು. ಆ ಪ್ರಯತ್ನದ ಒಂದು ಐತಿಹಾಸಿಕ ಇಣುಕು ನೋಟ ಈ ಲೇಖನದಲ್ಲಿದೆ.]

೧೯೬೬ನೇ ವರ್ಷ ಆರಂಭವಾದಾಗ ಭಾರತದ ಉಪಖಂಡದಲ್ಲಿ ಶಾಂತಿ ಏರ್ಪಡಿಸುವ ಆಸೆ ಜನರಲ್ಲಿ ಮೂಡಿತ್ತು. ಅಂತೆಯೇ ತಾಷ್ಕೆಂಟ್ ಸಮ್ಮೇಳನಕ್ಕೆ ಜನೆವರಿ ಮೂರರಂದು ಹೊರಟ ಪ್ರಧಾನಿ ಶಾಸ್ತ್ರಿಯವರು ಇಡೀ ದೇಶ 'ದ ಜನತೆಯ ಆಶೋತ್ತರಗಳನ್ನೂ, ಹಾರೈಕೆಯನ್ನೂ ಹೊತ್ತು ಪ್ರಯಾಣ ಮಾಡಿದರು. ಶಾಸ್ತ್ರಿಯವರ ಜೊತೆಯಲ್ಲಿ ತಾವೂ ತಾಷ್ಕೆಂಟಿಗೆ ಹೋಗಿ ಅವರ ಸೇವೆಯಲ್ಲಿ ತೊಡಗಬೇಕೆಂದು ಶ್ರೀಮತಿ ಲಲಿತಾ ಶಾಸ್ತ್ರಿಯವರು ಬಯಸಿದರು. ಶಾಸ್ತ್ರಿಯವರು ತಮ್ಮ ಪತ್ನಿಯನ್ನು ಕರೆದೊಯ್ಯಲು ಒಪ್ಪಲಿಲ್ಲ. ತಾಷ್ಕೆಂಟಿನಲ್ಲಿರುವಷ್ಟು ದಿನವೂ ಸಮ್ಮೇಳನಕ್ಕೆ ಸಂಬಂಧಪಟ್ಟಂತೆ ಮಾತುಕತೆಗಳಲ್ಲಿ ಮಗ್ನವಾಗಿರಬೇಕಾಗುತ್ತದೆ. ಪತ್ನಿಯು ಬಂದರೆ ಅವರ ಕಡೆ ಗಮನ ಕೊಡಲಾಗುವುದಿಲ್ಲವೆಂದು ಹೇಳಿ ಶಾಸ್ತ್ರಿಯವರು ಆಕೆಯನ್ನು ದೆಹಲಿಯಲ್ಲೇ ಬಿಟ್ಟು ಹೋದರು. ಲಲಿತಾ ಶಾಸ್ತ್ರಿಯವರು ದೆಹಲಿಯಲ್ಲಿಯೇ ಇದ್ದುಕೊಂಡು ಸಮ್ಮೇಳನದ ಯಶಸ್ಸಿಗಾಗಿ ದಿನವೂ ವಿಶೇಷ ಪೂಜೆ ಮತ್ತು ಭಜನೆಗಳನ್ನು ನಡೆಸಲು ನಿರ್ಧರಿಸಿದರು. ಶಾಸ್ತ್ರಿಯವರ ಕಡೆಯ ಮಗ ತಾಷ್ಕೆಂಟಿಗೆ ತನ್ನ ತಂದೆಯ ಜೊತೆಯಲ್ಲಿ ಹೋಗಲು ಇಷ್ಟಪಟ್ಟನು. ಆತನನ್ನು ಕರೆದೊಯ್ಯಲು ಶಾಸ್ತ್ರಿಯವರಿಗೆ ಮನಸ್ಸೂ ಇತ್ತು. ಆದರೆ ಮಗನನ್ನು ಸರ್ಕಾರಿ ವೆಚ್ಚದಲ್ಲಿ ಕರೆದುಕೊಂಡು ಹೋಗಲು ಇಚ್ಛೆಪಡಲಿಲ್ಲ. ತಾಷ್ಕೆಂಟಿಗೆ ಮಗನನ್ನು ಕರೆದುಕೊಂಡು ಹೋಗಿ ಬರಲು ಆತನ ಬಾಬಿನಲ್ಲಿ ಎಷ್ಟು ಖರ್ಚಾಗುವುದೆಂದು ಅಂದಾಜು ಮಾಡಿದರು. ಸುಮಾರು ಎಂಟುನೂರು ರುಪಾಯಿಗಳು ಖರ್ಚಾಗುವುದೆಂದು ಗೊತ್ತಾಯಿತು. ಆದರೆ ಅಷ್ಟು ಹಣ ಶಾಸ್ತ್ರಿಯವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇರಲಿಲ್ಲವಾದ್ದರಿಂದ ಮಗನನ್ನು ತಾಷ್ಕೆಂಟಿಗೆ ಕರೆದುಕೊಂಡು ಹೋಗಲಿಲ್ಲ.

ಪ್ರಧಾನಿ ಶಾಸ್ತ್ರಿಯವರು ಜನೆವರಿ ಮೂರರಂದು ಸಂಜೆ ತಾಷ್ಕೆಂಟ್ ನಗರವನ್ನು ತಲುಪಿದಾಗ ಅವರಿಗೆ ಅಲ್ಲಿನ ಜನರು ಸಂಭ್ರಮದ ಸ್ವಾಗತವನ್ನು ನೀಡಿದರು. ಪ್ರಧಾನಿ ಶಾಸ್ತ್ರಿ ಮತ್ತು ಅಧ್ಯಕ್ಷ ಅಯೂಬ್ ಖಾನರಿಗೆ ಎಲ್ಲ ರೀತಿಯಲ್ಲೂ ಸಮಾನವಾದ ಗೌರವಾತಿಥ್ಯ ಸನ್ಮಾನಗಳನ್ನು ತೋರಿಸಿ ಇಬ್ಬರ ಕನಸ್ಸೂ ಶಾಂತಿಯುತ ಒಪ್ಪಂದದ ಸಾಧನೆಯ ಕಡೆ ಹರಿಯುವಂತೆ ವಾತಾವರಣವನ್ನು ಮೂಡಿಸಲಾಗಿತ್ತು. ಸಮ್ಮೇಳನದ ಮಾತುಕತೆಯಲ್ಲಿ ಭಾಗಿಗಳಾಗಲು ಹಾಗೂ ಸಮಾಲೋಚನೆಗೆ ನೆರವಾಗಲು ಭಾರತ, ಪಾಕಿಸ್ತಾನ ಮತ್ತು ರಷ್ಯಾ ದೇಶಗಳ ವಿದೇಶಾಂಗ ಸಚಿವರುಗಳೂ, ಉನ್ನತ ರಾಜತಂತ್ರ ಪ್ರವೀಣರೂ, ಮಿಲಿಟರಿ ನಾಯಕರುಗಳೂ ತಾಷ್ಕೆಂಟಿನಲ್ಲಿ ಸಮಾವೇಶಗೊಂಡಿದ್ದರು.

ಇಡೀ ವಿಶ್ವದ ಗಮನವನ್ನು ಸೆಳೆದಿದ್ದ ಈ ಶೃಂಗ ಸಮ್ಮೇಳನವು ಜನೆವರಿ ನಾಲ್ಕರಂದು ತಾಷ್ಕೆಂಟಿನ 'ತಾಟಸ್ಥ್ಯ ನಿಲಯ'ದ ವಿಶಾಲ ಸಭಾಂಗಣದಲ್ಲಿ ಆರಂಭವಾಯಿತು. ಸೋವಿಯಟ್ ಪ್ರಧಾನಿ ಕೊಸಿಗಿನ್‌ರವರು ಸಮ್ಮೇಳನವನ್ನು ಉದ್ಘಾಟಿಸಿದರು. ಭಾರತ ಪಾಕಿಸ್ತಾನಗಳ ಶಾಂತಿಯುತ ಸಹಬಾಳ್ವೆ ಹಾಗೂ ಸೌಹಾರ್ದ ಸಂಬಂಧದ ನೂತನ ಅಧ್ಯಾಯವು ಈ ಸಮ್ಮೇಳನದಿಂದ ಆರಂಭವಾಗಲೆಂದು ಕೊಸಿಗಿನ್‌ರವರು ಆಶಿಸಿದರು. ಸಮ್ಮೇಳನದ ಯಶಸ್ಸಿಗಾಗಿ ತಾವು ಸರ್ವ ಸಹಕಾರವನ್ನು ಕೊಡುವುದಾಗಿ ಹೇಳಿದರು.

ಪ್ರಧಾನಿ ಲಾಲ್‌ಬಹಾದೂರ್ ಶಾಸ್ತ್ರಿಯವರು ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ, ಭಾರತ ಪಾಕಿಸ್ತಾನಗಳ ಮಧ್ಯೆ ಶಾಶ್ವತ ಶಾಂತಿ ನೆಲೆಗೊಳ್ಳಬೇಕೆಂಬ ತಮ್ಮ ಉತ್ಕಟ ಅಪೇಕ್ಷೆಯನ್ನೂ ಕಳಕಳಿಯಿಂದ ವ್ಯಕ್ತ ಪಡಿಸಿದರು. "ಯುದ್ಧವು ಯಾವ ಸಮಸ್ಯೆಯನ್ನೂ ಬಗೆಹರಿಸುವುದಿಲ್ಲ. ಅದು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಉಭಯ ದೇಶಗಳ ನಡುವಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಯುದ್ಧ ಮಾರ್ಗವನ್ನು ವರ್ಜಿಸಬೇಕು. ಸಮಸ್ಯೆಗಳನ್ನು ಶಾಂತಿಯುತ ಸಂಧಾನದ ಮೂಲಕ ಬಗೆಹರಿಸಿಕೊಳ್ಳುವ ಸಂಕಲ್ಪವನ್ನು ತೊಡಬೇಕು"– ಎಂದರು ಪ್ರಧಾನಿ ಶಾಸ್ತ್ರಿ.

ಪ್ರಧಾನಿ ಶಾಸ್ತ್ರಿಯವರು ಕೆಲವು ಮೌಲಿಕ ಅಂಶಗಳನ್ನು ಪ್ರಸ್ತಾಪಿಸಿದರು. "ಎರಡೂ ದೇಶಗಳ ನಡುವೆ ಸಂಬಂಧವನ್ನು ಉತ್ತಮಗೊಳಿಸುವುದೇ ನಮ್ಮ ಧ್ಯೇಯವಾಗಬೇಕು. ಉಭಯ ದೇಶಗಳ ನಡುವೆ ವ್ಯಾಪಾರ ಕ್ಷೀಣಿಸುತ್ತಿದೆ. ಅದಕ್ಕೆ ಬದಲಾಗಿ ವ್ಯಾಪಾರ ವ್ಯವಹಾರಗಳು ವೃದ್ಧಿಯಾಗಬೇಕು. ಭಾರತ ಪಾಕಿಸ್ತಾನಗಳ ನಡುವೆ ಅನೇಕ ನದಿಗಳು ಹರಿಯುತ್ತವೆ. ಅವು ವಿವಾದಗಳಿಗೆ ಮೂಲವಾಗದೆ ಎರಡೂ ದೇಶಗಳ ಸಂಪದಭಿವೃದ್ಧಿಗೆ ಸಾಧನವಾಗಬೇಕು".

"ನಮ್ಮ ಮೇಲೆ ಮಹತ್ತರ ಜವಾಬ್ದಾರಿ ಬಿದ್ದಿದೆ. ಭಾರತದ ಉಪಖಂಡದಲ್ಲಿ ಅರವತ್ತು ಕೋಟಿ ಜನರಿದ್ದಾರೆ. ಇದು ಇಡೀ ಪ್ರಪಂಚದ ಜನ ಸಂಖ್ಯೆಯಲ್ಲಿ ಐದನೇ ಒಂದು ಭಾಗವಾಗುತ್ತದೆ. ಭಾರತ, ಪಾಕಿಸ್ತಾನಗಳು ಪ್ರಗತಿ ಹಾಗೂ ಸಂಪದಭ್ಯುದಯವನ್ನು ಸಾಧಿಸಬೇಕಾದರೆ ಅವು ಶಾಂತಿಯುತವಾಗಿ ಬಾಳುವುದನ್ನು ಕಲಿಯಬೇಕು. ಸತತವಾಗಿ ಸಂಘರ್ಷಣೆ ಹಾಗೂ ಸಮರಗಳು ಸಂಭವಿಸಿದರೆ ನಮ್ಮ ಜನಗಳು ಇನ್ನೂ ಅತಿಯಾದ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಪರಸ್ಪರ ಹೋರಾಡುವುದರ ಬದಲು ನಾವು ಬಡತನದ ವಿರುದ್ಧ ಹೋರಾಡೋಣ. ಅಜ್ಞಾನ ಹಾಗೂ ರೋಗರುಜಿನಗಳ ವಿರುದ್ಧ ಹೋರಾಡಲು ಉಪಕ್ರಮಿಸೋಣ. ಎರಡೂ ದೇಶಗಳ ಜನರ ಸಮಸ್ಯೆಗಳು ಹಾಗೂ ಆಶೋತ್ತರಗಳು ಒಂದೇ ತೆರನಾಗಿವೆ. ಅವರು ಅಪೇಕ್ಷಿಸುವುದು ಸಂಘರ್ಷಣೆ ಅಥವಾ ಯುದ್ಧವನ್ನಲ್ಲ. ಅವರು ಬಯಸುವುದು ಶಾಂತಿ ಹಾಗೂ ಪ್ರಗತಿ. ಅವರಿಗೆ ಬೇಕಾಗಿರುವುದು ಅನ್ನ ಬಟ್ಟೆ ಮತ್ತು ವಸತಿಯೇ ಹೊರತು ಬಂದೂಕು ಮತ್ತು ಕೋವಿಗಳಲ್ಲ. ಜನತೆಗೆ ನಮ್ಮ ಹೊಣೆಯನ್ನು ನಿರ್ವಹಿಸಬೇಕಾದರೆ ನಾವು ಈ ಸಭೆಯಲ್ಲಿ ಏನಾದರೂ ನಿರ್ದಿಷ್ಟವಾದ ಹಾಗೂ ನೇರವಾದ ಸಾಧನೆಯನ್ನು ಗಳಿಸಬೇಕು.

ಇದು ಮಹತ್ತರವಾದ ಸಭೆ. ವಿಶ್ವದ ಕಣ್ಣುಗಳು ನಮ್ಮ ಮೇಲೆ ಕೇಂದ್ರೀಕೃತವಾಗಿವೆ. ಪಾಕಿಸ್ತಾನದ ಅಧ್ಯಕ್ಷರು ಮತ್ತು ಭಾರತದ ಪ್ರಧಾನಿ ಭೇಟಿ ಮಾಡಿ ಒಪ್ಪಂದಕ್ಕೆ ಬರಲು ವಿಫಲರಾದರೆಂದು ಹೇಳುವಂತಾಗಬಾರದು. ಇಡೀ ವಿಶ್ವದ ಘಟನೆಗಳ ಹಿನ್ನೆಲೆಯಲ್ಲಿ ನಮ್ಮ ಸಮಸ್ಯೆಗಳನ್ನು ಪರಶೀಲಿಸಬಲ್ಲೆವೆಂಬುದನ್ನು ನಾವು ನಮ್ಮ ಕೃತಿಯ ಮೂಲಕ ತೋರಿಸೋಣ" ಎಂದು ಪ್ರಧಾನಿ ಶಾಸ್ತ್ರಿ ಹೇಳಿದರು.

ಅಧ್ಯಕ್ಷ ಅಯೂಬ್ ಖಾನರವರು ಹೆಚ್ಚು ಕಡಿಮೆ ಶಾಸ್ತ್ರಿಯವರ ಧಾಟಿಯಲ್ಲೇ ಮಾತನಾಡಿದರು. ಆದರೆ ಷರತ್ತಿಲ್ಲದೆ ಎರಡೂ ದೇಶಗಳು ಯುದ್ಧ ನಿಷೇಧ ಮಾಡುವ ಸೂಚನೆಗೆ ಒಡಂಬಡಲಿಲ್ಲ. ಉಭಯ ದೇಶಗಳ ಮಧ್ಯೆ ಇರುವ 'ಮೂಲಭೂತ ಸಮಸ್ಯೆ' ಬಗೆಹರಿದರೆ ಯುದ್ಧ ನಿಷೇಧ ಒಪ್ಪಂದ ಸಾಧ್ಯವಾಗಬಹುದೆಂದು ರಾಗ ಎಳೆದರು. ಮುಂದಿನ ಒಂದು ವಾರ ಶಾಸ್ತ್ರಿ ಮತ್ತು ಅಯೂಬರು ನಿರಂತರ ಮಾತುಕತೆಯಲ್ಲಿ ತೊಡಗಿದರು. ಎರಡೂ ದೇಶಗಳ ಸುಮಧುರ ಬಾಂಧವ್ಯಕ್ಕೆ ಅಡ್ಡಿಯಾಗಿರುವ ಅಂಶಗಳನ್ನೆಲ್ಲಾ ಚರ್ಚೆಮಾಡಿದರು. ಕಾಶ್ಮೀರದ ಬಗ್ಗೆ ಚರ್ಚಿಸಿ ಇಬ್ಬರೂ ತಮ್ಮ ತಮ್ಮ ಸರ್ಕಾರಗಳ ನಿಲುವನ್ನು ಪನರುಚ್ಚರಿಸಿದರು. ಒಂದು ವಾರ ಪೂರ್ತಿ ಕೊಸಗಿನ್‌ರವರೂ ತಾಷ್ಕೆಂಟಿನಲ್ಲಿ ಹಾಜರಿದ್ದರು. ಶಾಸ್ತ್ರಿ-ಅಯೂಬ್ ಮಾತುಕತೆಗಳಲ್ಲಿ ಬಿಕ್ಕಟ್ಟು ಬಂದಾಗಲೆಲ್ಲಾ ಇಬ್ಬರು ನಾಯಕರನ್ನೂ ಭೇಟಿ ಮಾಡಿ ಮಾತುಕತೆಗಳ ಮುಂದುವರಿಕೆಗೆ ಇದ್ದ ತೊಡಕುಗಳನ್ನು ನಿವಾರಿಸುತ್ತಿದ್ದರು. ಸಂಧಾನ ಸುಲಲಿತವಾಗಿ ನಡೆಯಲು ಕೊಸಗಿನ್‌ರವರು ಅಪೂರ್ವ ರಾಜತಾಂತ್ರಿಕ ನೈಪುಣ್ಯತೆಯನ್ನು ತೋರಿದರು. ಕಡೆಗೆ ಮಾತುಕತೆಗಳು ಜನವರಿ ೧೦ನೇ ತಾರೀಖಿನ ಹೊತ್ತಿಗೆ ಮುಗಿಯಿತು. ಹತ್ತನೇ ತಾರೀಖು ತಾಷ್ಕೆಂಟ್ ಸಮ್ಮೇಳನದ ಮುಕ್ತಾಯ ಅಧಿವೇಶನ ನಡೆಯಿತು. ಸೋವಿಯಟ್ ಪ್ರಧಾನಿ ಕೊಸಗಿನ್‌ರವರ ಸಮ್ಮುಖದಲ್ಲಿ ಪ್ರಧಾನಿ ಶಾಸ್ತ್ರಿ ಮತ್ತು ಅಧ್ಯಕ್ಷ ಅಯೂಬ್ ಖಾನ್‌ರವರು ಶಾಂತಿ ಒಪ್ಪಂದಕ್ಕೆ ರುಜು ಹಾಕಿದರು. ಈ ಒಪ್ಪಂದ 'ತಾಷ್ಕೆಂಟ್ ಘೋಷಣೆ' ಎಂದು ಐತಿಹಾಸಿಕ ಪ್ರಸಿದ್ಧಿ ಪಡೆಯಿತು.

ಪ್ರಧಾನಿ ಶಾಸ್ತ್ರಿ ಮತ್ತು ಅಧ್ಯಕ್ಷ ಅಯೂಬ್ ಖಾನ್‌ರು ಹೊರಡಿಸಿದ ತಾಷ್ಕೆಂಟ್ ಘೋಷಣೆಯಲ್ಲಿ ಉಭಯ ದೇಶಗಳ ಮಧ್ಯೆ ಶಾಂತಿಯುತ ಹಾಗೂ ಸೌಹಾರ್ದಪೂರ್ಣ ಬಾಂಧವ್ಯವನ್ನು ಬೆಳೆಸುವ ಬಗ್ಗೆ ಇಬ್ಬರು ನಾಯಕರೂ ತಮ್ಮ ದೃಢ ನಿರ್ಧಾರವನ್ನು ಪ್ರಕಟಿಸಿದರು. ವಿವಾದಗಳನ್ನು ಬಗೆಹರಿಸಿಕೊಳ್ಳಲು ಶಾಂತಿಯುತ ಮಾರ್ಗವನ್ನು ಅನುಸರಿಸಬೇಕೆಂಬ ಹಾಗೂ ಬಲವನ್ನು ಉಪಯೋಗಿಸಬಾರದೆಂಬ ವಿಶ್ವಸಂಸ್ಥೆಯ ಪ್ರಣಾಳಿಕೆಯ ನಿಯಮವನ್ನು ಪಾಲಿಸುವ ಪ್ರತಿಜ್ಞೆ ಕೈಗೊಂಡರು. ಒಂದು ದೇಶದ ಆಂತರಿಕ ವಿಷಯಗಳಲ್ಲಿ ಮತ್ತೊಂದು ದೇಶವು ಕೈಹಾಕುವುದಿಲ್ಲವೆಂದು ಭರವಸೆ ಇತ್ತರು. ಭಾರತ, ಪಾಕಿಸ್ತಾನಗಳ ಸೈನ್ಯಗಳು ೧೯೬೫ರ ಅಗಸ್ಟ್ ೫ರ ಹಿಂದೆ ಇದ್ದ ಸ್ಥಳಗಳಿಗೆ ವಾಪಸಾಗಬೇಕೆಂದು ಇಬ್ಬರೂ ಒಪ್ಪಿದರು. ಈ ವಾಪಸಾತಿ ಕಾರ್ಯವು ೧೯೬೬ರ ಫೆಬ್ರವರಿ ೨೫ರ ಒಳಗಾಗಬೇಕೆಂದೂ ತೀರ್ಮಾನ ಮಾಡಿದರು. ಎರಡೂ ದೇಶಗಳ ಯುದ್ಧ ಬಂಧಿಗಳನ್ನು ಬಿಡುಗಡೆಮಾಡಲು ಒಪ್ಪಿದರು. ಉಭಯ ದೇಶಗಳ ರಾಜತಾಂತ್ರಿಕ ಸಂಬಂಧವು ಮಾಮೂಲಿನಂತೆ ಏರ್ಪಾಡಾಗಬೇಕೆಂದೂ, ಪರಸ್ಪರ ಅಪಪ್ರಚಾರ ಮಾಡುವುದು ನಿಲ್ಲಬೇಕೆಂದೂ, ನಿರಾಶ್ರಿತರ ಸಮಸ್ಯೆ, ನಿರ್ವಸಿತರ ಆಸ್ತಿಪಾಸ್ತಿಗಳ ವಿಲೇವಾರಿ ಬಗ್ಗೆ ಮಾತುಕತೆ ಮುಂದುವರೆಯಬೇಕೆಂದೂ ಘೋಷಣೆಯಲ್ಲಿ ತಿಳಿಸಿದರು. ಭಾರತ ಪಾಕಿಸ್ತಾನದ ನಡುವೆ ಬಾಂಧವ್ಯವನ್ನು ಕುದುರಿಸಲು ಮತ್ತು ಸಮಸ್ಯೆಗಳನ್ನು ಪರಿಶೀಲಿಸಲು ಆಗಿಂದಾಗ್ಗೆ ಉಭಯತ್ರರ ಶೃಂಗ ಸಭೆಗಳನ್ನು ನಡೆಸತಕ್ಕದ್ದೆಂದೂ ಇಬ್ಬರು ನಾಯಕರೂ ತೀರ್ಮಾನಿಸಿದರು. ತಾಷ್ಕೆಂಟ್ ಸಮ್ಮೇಳನದ ಯಶಸ್ಸಿಗೆ ಕಾರಣರಾದ ರಷ್ಯಾದ ಪ್ರಧಾನಿ ಕೊಸಗಿನ್‌ರನ್ನು ಪ್ರಧಾನಿ ಶಾಸ್ತ್ರಿ ಮತ್ತು ಅಧ್ಯಕ್ಷ ಅಯೂಬ್ ಖಾನರು ಮುಕ್ತ ಕಂಠದಿಂದ ಹೊಗಳಿದರು.

ತಾಷ್ಕೆಂಟ್ ಘೋಷಣೆಯು ಭಾರತ ಪಾಕಿಸ್ತಾನಗಳ ಇತಿಹಾಸದಲ್ಲಿ ಅಷ್ಟೇ ಅಲ್ಲದೆ ವಿಶ್ವದ ರಾಜತಾಂತ್ರಿಕ ಇತಿಹಾಸದಲ್ಲೇ ಮಹತ್ವಪೂರ್ಣ ದಾಖಲೆ ಆಯಿತು.

ತಾಷ್ಕೆಂಟ್ ಘೋಷಣೆಯ ವಾರ್ತೆಯು ವಿಶ್ವದ ಎಲ್ಲ ಪ್ರಮುಖ ರಾಷ್ಟ್ರಗಳ ಮುಖ್ಯಸ್ಥರಿಗೆ ಹರ್ಷವನ್ನುಂಟು ಮಾಡಿತು. ಚೀಣಾದ ಸರ್ವಾಧಿಕಾರಿಗಳನ್ನು ಬಿಟ್ಟರೆ ಮಿಕ್ಕೆಲ್ಲ ರಾಷ್ಟ್ರಗಳ ನಾಯಕರುಗಳೂ ತಾಷ್ಕೆಂಟಿನ ಸಾಧನೆಯನ್ನು ಪ್ರಶಂಸಿದರು. ಶಾಸ್ತ್ರಿ, ಅಯೂಬ್ ಮತ್ತು ಕೊಸಿಗಿನ್‌ರ ಮುತ್ಸದ್ದಿತನವನ್ನು ಮೆಚ್ಚಿದರು. ತಾಷ್ಕೆಂಟ್ ಘೋಷಣೆಯ ವಿವರಗಳು ಪ್ರಕಟವಾಗುತ್ತಿದ್ದ ಹಾಗೆಯೇ ಭಾರತದ ಜನತೆ ಸಂತಸಗೊಂಡಿತು. ಶಾಸ್ತ್ರಿಯವರು ಜನಮನವನ್ನು ಮತ್ತಷ್ಟು ಸೂರೆಗೊಂಡರು. ಸಮರ, ಶಾಂತಿಗಳೆರಡರಲ್ಲೂ ಏಕ ರೀತಿಯ ದಿಟ್ಟ ಸಾಧನೆಯನ್ನು ಗಳಿಸಿದ ನಾಯಕಮಣಿಗೆ ತಾಷ್ಕೆಂಟಿನಿಂದ ವಾಪಸು ಬರುವ ದಿನ ಅದ್ಭುತ ಸ್ವಾಗತ ನೀಡಲು ದೆಹಲಿಯ ಜನರು ಸಂಭ್ರಮ ಸಿದ್ಧತೆಯಲ್ಲಿ ತೊಡಗಿದ್ದರು. ತಾಷ್ಕೆಂಟಿನಲ್ಲಿ ಜನಸ್ತೋಮವು ಸಮ್ಮೇಳನದ ಯಶಸ್ಸಿನಿಂದ ಹಿಗ್ಗಿಹೋಗಿತ್ತು. ಈ ಸಮ್ಮೇಳನದ ಯಶಸ್ವಿ ಸಮಾಪ್ತಿಯ ಬಗ್ಗೆ ಅತೀವ ಹರ್ಷಗೊಂಡಿದ್ದ ಕೊಸಿಗಿನ್ ಅಂದು ರಾತ್ರಿ, ಶಾಸ್ತ್ರಿ ಮತ್ತು ಅಯೂಬ್ ಖಾನ್‌ರ ಗೌರವಾರ್ಥವಾಗಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಂತಸ ಮತ್ತು ಅನಿರ್ವಚನೀಯ ನೆಮ್ಮದಿಯಿಂದ ಕೂಡಿದ್ದ ಶಾಸ್ತ್ರಿಯವರು ಪಾದರಸದಂತೆ ಓಡಾಡಿ ಎಲ್ಲರೊಡನೆಯೂ ಸಂಭಾಷಣೆ ನಡೆಸಿದರು. ಶಾಸ್ತ್ರಿಯವರನ್ನು ಕುರಿತು ಅಯೂಬ್‌ಖಾನ್‌ರು 'ಖುದಾ ಹಾಫಿಸ್' (ದೇವರು ನಿಮ್ಮ ಜೊತೆಗೆ ಇರಲಿ) ಎಂದರು. ಶಾಸ್ತ್ರಿಯವರು ಅದೇ ರೀತಿ 'ಖುದಾ ಹಾಫಿಸ್' ಎಂದು ಹೇಳಿ "ಅಚ್ಛಾಯಿ ಹೋಗಯಾ" (ಒಳ್ಳೆಯದೇ ಆಯಿತು) ಅಂದರು. ಪ್ರಧಾನಿ ಶಾಸ್ತ್ರಿಯವರು ಪಕ್ಕದಲ್ಲಿದ್ದ ರಕ್ಷಣಾ ಸಚಿವ ವೈ.ಬಿ. ಚವ್ಹಾಣ್ ಕಡೆ ತಿರುಗಿ "ಯುದ್ಧಕಾಲದಲ್ಲಿ ನಾವು ನಮ್ಮ ಸರ್ವಶಕ್ತಿಯಿಂದಲೂ ಹೋರಾಡಿದೆವು. ಈಗ ಶಾಂತಿಗೋಸ್ಕರ ನಮ್ಮ ಸರ್ವಶಕ್ತಿಯಿಂದಲೂ ಹೋರಾಡಬೇಕು", ಎಂದರು. ತಾಷ್ಕೆಂಟ್ ಸಮ್ಮೇಳನದ ಯಶಸ್ಸಿಗೆ ಬಹುಮಟ್ಟಿಗೆ ಕಾರಣರಾದ ಕೊಸಿಗಿನ್‌ರ ಬಗ್ಗೆ ಪ್ರಶಂಸೆಯ ನುಡಿಗಳನ್ನು ಆಡಿದರು. ಅಂದು ಸತ್ಕಾರ ಸಮಾರಂಭ ಮುಗಿಯುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆ ಆಗಿಬಿಟ್ಟಿತ್ತು. ಶಾಸ್ತ್ರಿಯವರು ತಮ್ಮ ಬಿಡಾರಕ್ಕೆ ವಾಪಸು ಬಂದರು. ತಾಷ್ಕೆಂಟ್ ಘೋಷಣೆಯ ಬಗ್ಗೆ ಹಿರಿಯ ರಾಜಕಾರಣಿ ಸಿ.ರಾಜಗೋಪಾಲಾಚಾರಿಯವರಿಗೆ ಪತ್ರವೊಂದನ್ನು ಹೇಳಿ ಬರೆಸಿದರು. ನಂತರ ದೆಹಲಿಯಲ್ಲಿದ್ದ ತಮ್ಮ ಪತ್ನಿಯೊಡನೆ ಟೆಲಿಫೋನ್ ಮೂಲಕ ಮಾತನಾಡಿ ಅವರ ಯೋಗಕ್ಷೇಮ ವಿಚಾರಿಸಿದರು. ತಾವು ಪೂರ್ಣ ಆರೋಗ್ಯದಿಂದಿರುವುದಾಗಿಯೂ, ಮಾರನೇ ದಿನ ಕಾಬೂಲಿಗೆ ಹೋಗಿ ಮರುದಿನ ದೆಹಲಿಗೆ ವಾಪಸು ಬರುವುದಾಗಿ ಹೇಳಿದರು. ತಾಷ್ಕೆಂಟ್ ಘೋಷಣೆ ಬಗ್ಗೆ ವಿವಿಧ ರಾಜಕೀಯ ಪಕ್ಷಗಳ ಪ್ರತಿಕ್ರಿಯೆ ಏನೆಂದು ತಮ್ಮ ಅಳಿಯನೊಂದಿಗೆ ಟೆಲಿಫೋನ್‌ನಲ್ಲಿ ಮಾತನಾಡಿ ತಿಳಿದುಕೊಂಡರು. ಗೃಹಮಂತ್ರಿ ನಂದಾರೊಡನೆ ಮಾತನಾಡಿ ಒಪ್ಪಂದದ ವಿವರಗಳನ್ನು ತಿಳಿಸಿದರು.

ತಾಷ್ಕೆಂಟ್ ಒಪ್ಪಂದದ ವಿವರಗಳನ್ನು ತಿಳಿದು ಅಂದು ರಾತ್ರಿ ಭಾರತದ ಜನ ನೆಮ್ಮದಿಯಿಂದ ಮಲಗಿದ್ದರು.

ಆದರೆ ಅಂದು ರಾತ್ರಿ ೧೧.೩೦ ಗಂಟೆಗೆ ಮಲಗಿದ್ದ ಪ್ರಧಾನಿ ಶಾಸ್ತ್ರಿಯವರಿಗೆ ಮಧ್ಯರಾತ್ರಿ ೧-೨೫ ಗಂಟೆ ಹೊತ್ತಿಗೆ ಹೃದಯ ವೇದನೆ ಉಂಟಾಯಿತು. ಪಕ್ಕದ ಕೊಠಡಿಯಲ್ಲಿದ್ದ ವೈದ್ಯರು ತಕ್ಷಣ ಚುಚ್ಚುಮದ್ದನ್ನು ಕೊಟ್ಟರು. ಆರೇಳು ನಿಮಿಷ ಅತೀವ ವೇದನೆಯನ್ನು ಅನುಭವಿಸಿದರು. ಲಾಲ್ ಬಹದ್ದೂರರು ಎದೆ ಹಿಡಿದುಕೊಂಡು "ಹೇ ರಾಮ್" ಎಂದು ಹೇಳುತ್ತಿರುವಂತೆಯೇ ಅವರ ಪ್ರಾಣ ಹೋಯಿತು.

ಪ್ರಧಾನಿ ಶಾಸ್ತ್ರಿಯವರ ನಿಧನವಾರ್ತೆ ವಿಶ್ವದಾದ್ಯಂತ ಪ್ರಸಾರವಾಯಿತು.

ಬೆಳಗಾಗುತ್ತಲೆ ಬಾನುಲಿಯ ಮೂಲಕ ಶಾಸ್ತ್ರಿಯವರ ನಿಧನದ ಸುದ್ದಿಯನ್ನು ಕೇಳಿದ ಭಾರತೀಯರೆಲ್ಲರಿಗೂ ಸಿಡಿಲು ಬಡಿದಂತಾಯಿತು. ತಾಷ್ಕೆಂಟಿನ ಜನ ಈ ದುಃಖ ವಾರ್ತೆಯನ್ನು ಕೇಳಿ ವ್ಯಸನಪಟ್ಟರು. ವಿಶ್ವದ ರಾಜಕಾರಣಿಗಳು ಈ ಮಹಾ ಶಾಂತಿದೂತನ ನಿಧನದಿಂದ ಶೋಕಭರಿತರಾದರು. ಶಾಸ್ತ್ರಿಯವರ ನಿಧನದಿಂದ ಲೋಕ ಕಿರಿದಾಯಿತೆಂದು ಅಮೆರಿಕಾದ ಅಧ್ಯಕ್ಷ ಜಾನ್ಸನ್‌ರು ಪರಿತಪಿಸಿದರು. ವಿಶ್ವದ ಮಹಾ ಮುತ್ಸದ್ದಿ ಶಾಸ್ತ್ರಿಯವರ ಸಾಧನೆ ಅಮರವಾದುದೆಂದು ರಷ್ಯಾದ ಪ್ರಧಾನಿ ಕೊಸಿಗಿನ್ ಹೇಳಿದರು. ಲಾಲ್ ಬಹದ್ದೂರ್ ಅಪ್ರತಿಮ ಶಾಂತಿವಾದಿಯಾಗಿದ್ದರೆಂದು ಅಯೂಬ್‌ಖಾನರು ಹೊಗಳಿದರು. ಶಾಸ್ತ್ರಿಯವರ ಪಾರ್ಥಿವ ಶರೀರವನ್ನು ಹೊತ್ತ ವಿಮಾನ ಪಾಕಿಸ್ತಾನದ ಮೂಲಕ ಹಾರಿಹೋಗಬೇಕೆಂದು ಮನವಿಮಾಡಿಕೊಂಡರು. ಶಾಸ್ತ್ರಿಯವರ ಕಳೇಬರಹವನ್ನು ಇಟ್ಟಿದ್ದ ಸಂಪುಟವನ್ನು ವಿಮಾನದಲ್ಲಿರಿಸುವಾಗ ಅಯೂಬ್ ಖಾನರು ಕೊಸಿಗಿನ್‌ರ ಜೊತೆ ಸೇರಿ ಹೆಗಲು ಕೊಟ್ಟರು. ತಾಷ್ಕೆಂಟಿನ ಲಕ್ಷಾಂತರ ಜನ ಕಣ್ಣೀರು ಒರೆಸಿಕೊಳ್ಳುತ್ತಾ ಶಾಸ್ತ್ರಿಯವರ ಕಳೇಬರಕ್ಕೆ ಗೌರವ ಸಲ್ಲಿಸಿದರು.

ಭಾರತದ ರಾಷ್ಟ್ರಾಧ್ಯಕ್ಷ ಡಾ॥ ರಾಧಾಕೃಷ್ಣನ್‌ರವರು ಶೋಕಭರಿತರಾಗಿ ಬಾನುಲಿಯಿಂದ ಮಾತನಾಡುತ್ತಾ ಲಾಲ್ ಬಹದ್ದೂರ್‌ರ ಗುಣಗಾನ ಮಾಡಿದರು. ಯುದ್ಧ ಸಮಯದಲ್ಲಿ ಅತೀವ ಸ್ಥೈರ್ಯವನ್ನು ತೋರಿ ನಂತರ ಶಾಂತಿಗಾಗಿ ಅಪ್ರತಿಮ ಸಾಹಸ ಮಾಡಿದ ಶಾಸ್ತ್ರಿಯವರಿಗೆ ಈ ವರ್ಷ ರಿಪಬ್ಲಿಕ್ ದಿನದಂದು 'ಭಾರತರತ್ನ' ಪ್ರಶಸ್ತಿ ಕೊಡಲು ತಾವು ಸಂಕಲ್ಪಿಸಿದ್ದುದಾಗಿಯೂ, ಈಗ ಭಾರವಾದ ಹೃದಯದಿಂದ ಆ ಪ್ರಶಸ್ತಿಯನ್ನು ಮರಣೋತ್ತರದಲ್ಲಿ ಶಾಸ್ತ್ರಿಯವರಿಗೆ ಸಲ್ಲಿಸುತ್ತಿರುವುದಾಗಿ ಹೇಳಿದರು.

ಜನೆವರಿ ೧೧ರೆಂದು ಮಧ್ಯಾಹ್ನ ಶಾಸ್ತ್ರಿಯವರನ್ನು ಹೊತ್ತು ತಂದ ವಿಮಾನ ದೆಹಲಿಯನ್ನು ತಲುಪಿತು. ಹಿಂದೆಯೇ ಮತ್ತೊಂದು ವಿಮಾನದಲ್ಲಿ ರಷ್ಯಾದ ಪ್ರಧಾನಿ ಕೊಸಿಗಿನ್ ಬಂದರು. ದೆಹಲಿಯ ಜನ ಮುಂದಿನ ಇಪ್ಪತ್ತು ಗಂಟೆಗಳಕಾಲ ಶಾಸ್ತ್ರಿಯವರ ನಿವಾಸದ ಬಳಿಸಾರಿ ಅವರ ಅಂತಿಮ ದರ್ಶನ ಪಡೆದರು. ಶಾಸ್ತ್ರಿಯವರ ಅಂತ್ಯ ಸಂಸ್ಕಾರದಲ್ಲಿ ಭಾವಹಿಸಲು ದೇಶವಿದೇಶಗಳಿಂದ ಸರ್ಕಾರಿ ಪ್ರಮುಖರುಗಳು ದೆಹಲಿಗೆ ಧಾವಿಸಿ ಬಂದರು. ಅಮೆರಿಕಾದ ಉಪಾಧ್ಯಕ್ಷ ಹಂಫ್ರಿ, ವಿದೇಶಾಂಗ ಕಾರ್ಯದರ್ಶಿ ಡೀನ್‌ರಸ್ಕ್, ಬ್ರಿಟನ್ನಿನ ರಾಣಿಯ ಪ್ರತಿನಿಧಿಗಳೂ ದೆಹಲಿಗೆ ಬಂದು ತಮ್ಮ ತಮ್ಮ ರಾಷ್ಟ್ರಗಳ ಪರವಾಗಿ ಶಾಂತಿ ವಿಜೇತ ಶಾಸ್ತ್ರಿಯವರಿಗೆ ಅಂತಿಮ ಪ್ರಣಾಮ ಸಲ್ಲಿಸಿದರು.

ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ತಮ್ಮ ಅಪ್ರತಿಮ ಸಾಧನೆಗಳಿಂದ ಭಾರತದ ಇತಿಹಾಸದಲ್ಲಿ ಅಮರ ಸ್ಥಾನಗಳಿಸಿದ್ದಾರೆ. ರಾಜಸ ಗುಣ ಪ್ರಧಾನವಾದ ರಾಜಕೀಯ ಕ್ಷೇತ್ರದಲ್ಲಿ ಶಾಸ್ತ್ರಿಯವರು ಅನುಪಮ ಸಾತ್ವಿಕ ಶಕ್ತಿಯನ್ನು ಪ್ರದರ್ಶಿಸಿದರು. ಹಣದ ಥೈಲಿಯೇ ರಾಜಕಾರಣದ ಯಶಸ್ಸಿಗೆ ಮೂಲವೆಂಬ ಮಾತನ್ನು ಸುಳ್ಳು ಮಾಡಿದರು. ಪ್ರಾಮಾಣಿಕ ವಿಚಾರಸರಣಿಯಿಂದ ಪರಿವರ್ತನೆ ಮಾಡುವ ಸಾಮರ್ಥ್ಯವೇ ಅವರಲ್ಲಿದ್ದ ಅಪಾರ ಶಕ್ತಿ. ಅನಾಸಕ್ತಿಯಿಂದ ದೇಶಸೇವೆ ಮಾಡಿ ರಾಷ್ಟ್ರವು ಇತಿಹಾಸದ ಸಂದಿಗ್ಧ ಸ್ಥಿತಿಯಲ್ಲಿದ್ದಾಗ್ಗೆ ಅಧಿಕಾರ ವಹಿಸಿಕೊಂಡು ಭಾರತದ ಪ್ರಜಾಪ್ರಭುತ್ವದ ವಿಜಯ ಪತಾಕೆಯನ್ನು ಎತ್ತಿ ಹಿಡಿದರು. ಭಾರತದ ಜನತೆಯಲ್ಲಿ ಆತ್ಮ ವಿಶ್ವಾಸ ಹಾಗೂ ಮನೋಸ್ಥೈರ್ಯವನ್ನು ತುಂಬಿ ಗಾಂಧೀ ಮತ್ತು ನೆಹರೂರವರಂತೆಯೇ ಶಾಂತಿ ಸಂದೇಶವನ್ನು ವಿಶ್ವಕ್ಕೆ ಸಾರಿದ ಲಾಲ್‌ಬಹದ್ದೂರರು ಅಮರರಾಗಿದ್ದಾರೆ.

(ಇದೇ ಲೇಖಕರ ಲಾಲ್‌ಬಹದ್ದೂರ್ ಶಾಸ್ತ್ರಿ ಎಂಬ ಪುಸ್ತಕದಿಂದ)

* * *

ಜನಪದ ನಿಲಯದ ಅಂತರಂಗದಲ್ಲಿ ೩೯

-ಸುರೇಂದ್ರ ಕೌಲಗಿ

ಅತ್ಯಂತ ಕಠಿಣವಾದ ಕೆಲಸ ಯಾವುದು ಸರಿಯೆಂದು ತಿಳಿಯುವುದಲ್ಲ. ಆದರೆ ಸರಿಯಾದುದನ್ನು ಮಾಡುವುದು. -ಜಾನ್ಸನ್



ಗ್ರಾಮೀಣ ಅಂಗವಿಕಲ ಮಕ್ಕಳ ಅಭ್ಯುದಯಕ್ಕಾಗಿ ಪ್ರಾರಂಭವಾದ ಕರುಣಾಗೃಹ ಮತ್ತು ಸಾಮಾಜಿಕ ತೊಂದರೆಗೊಳಗಾದ ಮಹಿಳೆಯರ ಸಂಕ್ಷಿಪ್ತ ಶಿಕ್ಷಣ ಶಾಲೆ ಕಾರ್ಯಕ್ರಮ ಟ್ರಸ್ಟಿನ ಬೆಳವಣಿಗೆಯಲ್ಲಿ ಎರಡು ಪ್ರಮುಖ ಹೆಜ್ಜೆಗಳೆಂದು ಹೇಳಬಹುದು. ಈ ಎರಡು ಕಾರ್ಯಕ್ರಮಗಳು ಟ್ರಸ್ಟಿಗೆ ಒಂದು ಸಾಮಾಜಿಕ ಮನ್ನಣೆಯನ್ನು ತಂದುಕೊಡುವುದರ ಜೊತೆಗೆ ಟ್ರಸ್ಟಿನ ಕಾರ್ಯಕ್ರಮಗಳನ್ನು ಬೆಳೆಸುವುದರ ಬಗ್ಗೆಯೂ ಪ್ರಮುಖ ಪ್ರೇರಕ ಕಾರಣಗಳಾದವು. ಸಂಕ್ಷಿಪ್ತ ಶಿಕ್ಷಣ ಶಾಲೆಯ ಮಹಿಳೆಯರ ಮತ್ತು ಕರುಣಾಗೃಹದ ವಿದ್ಯಾರ್ಥಿಗಳ ಪುರ್ನವಸತಿಯ ಯೋಚನೆ ವಿಶೇಷ ಮಹತ್ವದ ಮತ್ತು ಅಗತ್ಯದ ಸಂಗತಿಯಾಗಿ ಎದುರು ನಿಂತಿತು. ಮೇಲುಕೋಟೆ ಪೂರ್ಣತಃ ಗ್ರಾಮೀಣ ಪ್ರದೇಶವಾಗಿದ್ದುದರಿಂದ ಅಲ್ಲಿ ಅತ್ಯಾಧುನಿಕ ರೀತಿಂ ು ಪುರ್ನವಸತಿ ಕಾರ್ಯಗಳನ್ನು ಕೈಗೊಳ್ಳುವುದು ಸಾಧ್ಯವಿರಲಿಲ್ಲ ಅಲ್ಲದೆ ಟ್ರಸ್ಟಿನ ಉದ್ದೇಶವು ಪ್ರಧಾನವಾಗಿ ಗ್ರಾಮೀಣ ಅಭಿವೃದ್ಧಿಯೆ ಆಗಿದ್ದುದರಿಂದ ಪುರ್ನವಸತಿಯ ಯಾವುದೇ ಯೋಜನೆ ಗ್ರಾಮಾಭಿಮುಖವಾಗಿಯೆ ಇರಬೇಕೆಂಬುದು ಟ್ರಸ್ಟಿನ ತಿಳುವಳಿಕೆಯಾಗಿತ್ತು. ಬೃಹತ್ ಪ್ರಮಾಣದ ಪುರ್ನವಸತಿ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಬೇಕಾದ ಆರ್ಥಿಕ ಬಲವಾಗಲಿ ಮತ್ತು ಸಾಮರ್ಥ್ಯವಾಗಲಿ ಟ್ರಸ್ಟಿನಲ್ಲಿರಲಿಲ್ಲ. ಆದರೆ ಟ್ರಸ್ಟ್ ತನ್ನ ಕ್ರಿಯಾಶೀಲತೆಯನ್ನು ಕಳೆದು ಕೊಳ್ಳುವಂತೆಯೂ ಇರಲಿಲ್ಲ. ಆದ್ದರಿಂದ ಲಭ್ಯವಿದ್ದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸುತ್ತಲಿನ ಸಮಾಜಕ್ಕೆ ಪ್ರಯೋಜನಕಾರಿಯಾದ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಟ್ರಸ್ಟಿಗೆ ಇದ್ದ ದಾರಿಯಾಗಿತ್ತು. ಈ ಹಿನ್ನಲೆಯಲ್ಲಿ ಟ್ರಸ್ಟ್ ೧೯೬೩ರಲ್ಲಿ ಎರಡು ಯೋಜನೆಗಳನ್ನು ಹಾಕಿಕೊಂಡಿತು. ಒಂದನೆಯದು ಅಂಗವಿಕಲ ಯುವಕರ ಪುರ್ನವಸತಿಗಾಗಿ ಹೊಸ ಜೀವನ ದಾರಿ ಎಂಬ ಕಾರ್ಯಕ್ರಮ ಮತ್ತು ಎರಡನೆಯದು ಸಂಕ್ಷಿಪ್ತ ಶಿಕ್ಷಣ ಶಾಲೆಯ ಮಹಿಳೆಯರ ಪುರ್ನವಸತಿಗಾಗಿ ಮುದ್ರಣಾಲಯದ ಕಾರ್ಯಕ್ರಮ. ೬೦ರ ದಶಕದಲ್ಲಿ ಮುದ್ರಣ ಕ್ಷೇತ್ರ ಇಂದಿನಷ್ಟು ಆಧುನಿಕ ತಾಂತ್ರಿಕತೆಯನ್ನು ಹೊಂದಿರಲಿಲ್ಲ. ಆಗ ಲೆಟರ್ ಪ್ರೆಸ್‌ನ ಯುಗ. ಅಂದರೆ ಕೈಯಿಂದ ಅಕ್ಷರದ

ಮೊಳೆಗಳನ್ನು ಜೋಡಿಸಿ ಟ್ರೆಡಲ್ ಎಂಬ ಚಿಕ್ಕ ಯಂತ್ರದಲ್ಲಿ ಮುದ್ರಿಸುವ ಕಾಲ ಅದಾಗಿತ್ತು. ನಗರ ಪ್ರದೇಶದಲ್ಲಿ ಮಾತ್ರ ಒಂದು ಸಲಕ್ಕೆ ೮ ಪುಟಗಳು ಮುದ್ರಣವಾಗುವಂಥ ಸಿಲಿಂಡರ್ ಯಂತ್ರಗಳಿದ್ದವು. ಇನ್ನು ಮುದ್ರಿತ ಕಾಗದಗಳನ್ನು ಮಡಚುವುದು, ಹೊಲಿಯುವುದು ಇತ್ಯಾದಿ ಎಲ್ಲ ಕೆಲಸಗಳು ಶಾರೀರಕವಾಗಿಯೆ ನಡೆಯಬೇಕಾಗಿತ್ತು. ಒಟ್ಟಿನಲ್ಲಿ ಆಗಿನ ಮುದ್ರಣಾಲಯಗಳು ಹೆಚ್ಚು ಶಾರೀರ ಶ್ರಮ ಪ್ರಧಾನ ಉದ್ಯೋಗವಾಗಿದ್ದವು. ತಾಲ್ಲೂಕು ಮತ್ತು ಜಿಲ್ಲಾ ಪ್ರದೇಶಗಳಲ್ಲಿ ಹೊಸ ಹೊಸ ಮುದ್ರಣಾಲಯಗಳು ಹುಟ್ಟಿಕೊಳ್ಳುತ್ತಿದ್ದವು. ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಧನಸಹಾಯ ಸಿಗುತ್ತಿತ್ತು. ಆದ್ದರಿಂದ ಆಗ ಮುದ್ರಣ ಕೈಗಾರಿಕೆಯಲ್ಲಿ ಉದ್ಯೋಗವಕಾಶಗಳು ಹೆಚ್ಚು ಇದ್ದವು. ಈ ಒಂದು ಉದ್ಯೋಗಪ್ರಣೀತ ಶಿಕ್ಷಣವನ್ನು ಸಂಕ್ಷಿಪ್ತ ಶಿಕ್ಷಣ ಶಾಲೆಯ ಮಹಿಳೆಯರಿಗೆ ಕೊಟ್ಟು ಅವರು ಸ್ವತಂತ್ರವಾಗಿ ಜೀವನ ನಡೆಸುವಂತೆ ಮಾಡಬಹುದೆಂದು ಆಲೋಚಿಸಲಾಯಿತು. ಇದರ ಪರಿಣಾಮವಾಗಿ ಟ್ರಸ್ಟಿನ ಆಶ್ರಯದಲ್ಲಿಯೆ ತರಬೇತಿ ಮತ್ತು ಆದಾಯದ ನಿಮಿತ್ತವಾಗಿ ಒಂದು ಮುದ್ರಣಾಲಯವನ್ನು ಆರಂಭಿಸಲಾಯಿತು. ಈ ಮುದ್ರಣಾಲಯದಲ್ಲಿ ಹೆಣ್ಣು ಮಕ್ಕಳಿಗೆ ಅಕ್ಷರಗಳ ಜೋಡಣೆ, ಮುದ್ರಣಕಲೆ, ಬೈಂಡಿಂಗ್, ಇತ್ಯಾದಿ ಕ್ಷೇತ್ರಗಳಲ್ಲಿ ತರಬೇತಿ ಕೊಡಲು ಯೋಜನೆ ಹಾಕಿಕೊಳ್ಳಲಾಯಿತು. ಈ ಮುದ್ರಣಾಲಯಕ್ಕೆ 'ಜನಪದ ಮುದ್ರಣಾಲಯ' ಎಂದು ಹೆಸರಿಡಲಾಯಿತು. ಮುದ್ರಣಾಲಯಕ್ಕೆ ಬೇಕಾದ ಸಲಕರಣೆಗಳನ್ನು ಖರೀದಿಸಲು ರಾಜ್ಯ ಸರ್ಕಾರದ ಸಮಾಜಕಲ್ಯಾಣ ಇಲಾಖೆ ಮತ್ತ ಇಂಗ್ಲೆಂಡಿನ ಆಕ್ಸ್‌ಫ್ಯಾಮ್ ಸಂಸ್ಥೆ ಧನಸಹಾಯ ಮಾಡಿದವು. ಮುದ್ರಣಾಲಯಕ್ಕಾಗಿ ಕರುಣಾಗೃಹದ ಪಕ್ಕದಲ್ಲಿಯೆ ಇದ್ದ ಹಳೆಯ ತೊಟ್ಟಿಮನೆಯೊಂದನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಈ ಮನೆ ಮುದ್ರಣಾಲಯಕ್ಕೆ ಸೂಕ್ತವಾದುದಂಥದೇನೂ ಆಗಿರಲಿಲ್ಲ. ಹೆಂಚಿನ ಛಾವಣಿ ಇದ್ದುದರಿಂದ ಮಳೆಗಾಲದಲ್ಲಿ ಸೋರುತ್ತಿತ್ತು. ನೆಲ ಮಣ್ಣಿನದಾಗಿದುದರಿಂದ ಗುಡಿಸಿದಾಗಲೆಲ್ಲ ಸಾಕಷ್ಟು ಧೂಳು ಎದ್ದು ಅಕ್ಷರ ಮೊಳೆಗಳ ಮನೆಯಲ್ಲಿ ಮತ್ತು ಮುದ್ರಿತಗೊಂಡ ಕಾಗದದ ಮೇಲೆ ಕೂಡುತ್ತಿತ್ತು. ಇದರಿಂದಾಗಿ ಸ್ವಚ್ಛತೆಯ ಕೆಲಸಕ್ಕಾಗಿಯೆ ಬಹಳಷ್ಟು ಸಮಯ ಕಳೆಯುತ್ತಿತ್ತು. ಮುದ್ರಣಾಲಯವನ್ನೇನೋ ಸಿದ್ಧಮಾಡಲಾಯಿತು. ಆದರೆ ಮುದ್ರಣ ಕೆಲಸದ ಪರಿಚಯ ಯಾರಿಗೂ ಇರಲಿಲ್ಲ. ಆದ್ದರಿಂದ ಮೈಸೂರಿನಿಂದ ಒಬ್ಬ ವ್ಯಕ್ತಿಯನ್ನು ಬರಮಾಡಿಕೊಂಡು ಅವನಿಂದ ಕೆಲ ಪ್ರಾರಂಭಿಕ ಮತ್ತು ಪ್ರಾಥಮಿಕ ಮುದ್ರಣದ ಕೆಲಸಗಳನ್ನು ಸಂಕ್ಷಿಪ್ತ ಶಿಕ್ಷಣ ಶಾಲೆಯ ಮಹಿಳೆಯರಿಗೆ ಕಲಿಸಲಾಯಿತು. ಅವರಲ್ಲಿ ಕೆಲವರು ಬೇಗನೆ ಕೆಲಸ ಕಲಿತು ದಕ್ಷತೆಯಿಂದ ಕೆಲಸ ಮಾಡುವಷ್ಟು ಪರಿಣಿತಿ ಪಡೆದರು. ಮುದ್ರಣಾಲಯವನ್ನುನಡೆಸಿಕೊಂಡು ಹೋಗಲು ಕೆಲಸದ ಅಗತ್ಯವಿತ್ತು. ಅದಕ್ಕಾಗಿ ಅಕ್ಕಪಕ್ಕದ ಕಾಲೇಜುಗಳ ವಾರ್ಷಿಕ ಸ್ಮರಣ ಸಂಚಿಕೆಗಳ ಮುದ್ರಣ ಕೆಲಸವನ್ನು

ಮತ್ತು ಕೆಲ ಸ್ನೇಹಿತರ ಸಾಹಿತ್ಯ ಕೃತಿಗಳನ್ನು ಹಾಗೂ ಸಹಕಾರ ಸಂಘಗಳ ವಾರ್ಷಿಕ ಜಮಾ-ಖರ್ಚು ಪುಸ್ತಕಗಳ ಮುದ್ರಣವನ್ನು ಮಾಡಬೇಕಾಗುತ್ತಿತ್ತು. ಆಗ ಮುದ್ರಣಾಲಯದಲ್ಲಿ ಖಾಯಂ ಆಗಿ ಐದಾರು ಜನ ಮಹಿಳೆಯರಿಗೆ ಉದ್ಯೋಗವನ್ನು ಕೊಡುವುದರ ಜೊತೆಗೆ ಕೇಂದ್ರ ಸರ್ಕಾರದ ಯೋಜನೆಯ ಆಶ್ರಯದಲ್ಲಿ ತರಬೇತಿ ಕಾರ್ಯಕ್ರಮವನ್ನು ಸಹ ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಡಿ ಸುಮಾರು ಹನ್ನೆರಡು ಜನ ಯುವತಿಯರು ಸ್ಟೈಪೆಂಡಿನೊಂದಿಗೆ ಮುದ್ರಣದ ಕಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಇದು ೬ ತಿಂಗಳ ಅವಧಿಯ ಯೋಜನೆಯಾಗಿತ್ತು. ಅಲ್ಲಿಗೆ ಮೇಲುಕೋಟೆಯಂಥ ಪುಟ್ಟ ಗ್ರಾಮದ ಮುದ್ರಣಾಲಯವೊಂದರಲ್ಲಿ ೨೦ ಜನ ಮಹಿಳೆಯರು ಕೆಲಸ ಮಾಡುವಂಥ ಒಂದು ಪ್ರಗತಿ ಸಿದ್ಧಿಯಾಯಿತು. ಇನ್ನು ನಂಬರಿಂಗ್, ಇಂಪೋಸಿಂಗ್ ಮತ್ತು ಬೈಂಡಿಂಗ್ ಇತ್ಯಾದಿ ಕೆಲಸಗಳಲ್ಲಿ ಕರುಣಾಗೃಹದ ವಿದ್ಯಾರ್ಥಿಗಳು ತೊಡಗುತ್ತಿದ್ದರು. ಮುದ್ರಣಾಲಯ ಒಂದು ಪರಿವಾರದ ರೀತಿಯಲ್ಲಿ ಸಂತೋಷವಾಗಿ ಕೆಲಸ ಮಾಡಿಕೊಂಡು ಬರುವ ಸ್ಥಳವಾಗಿತ್ತು. ಮುದ್ರಣಾಲಯಕ್ಕೆ ಇನ್ನೂ ಹೆಚ್ಚಿನ ಕೆಲಸವನ್ನು ತರಬೇಕೆಂಬ ಉದ್ದೇಶದಿಂದ ಕಾಗದದ ಮೇಲೆ ಗೆರೆ ಹಾಕುವ ಯಂತ್ರವೊಂದನ್ನು ತರಲಾಯಿತು. ಇದು ಕೂಡ ಕೈಯಿಂದ ಚಾಲನೆಯಾಗುವಂಥ ಯಂತ್ರವಾಗಿತ್ತು. ಕರುಣಾಗೃಹದ ಹನುಮಂತ ಕಾಗದದ ಮೇಲೆ ಗೆರೆ ಹಾಕುವ ಮತ್ತು ಬೈಂಡ್ ಮಾಡುವ ಕೆಲಸದಲ್ಲಿ ವಿಶೇಷ ಪರಿಶ್ರಮ ವಹಿಸುತ್ತಿದ್ದ. ಈ ಯಂತ್ರದ ಸಹಾಯದಿಂದ ಬರವಣಿಗೆ ಪುಸ್ತಕಗಳನ್ನು ಮತ್ತು ಸೊಸೈಟಿಗಳಿಗೆ ಬೇಕಾದ ಲೆಕ್ಕದ ಪುಸ್ತಕಗಳನ್ನು ತಯಾರಿಸಬಹುದಾಗಿತ್ತು. ಈ ಯಂತ್ರ ಬಂದ ಮೇಲೆ ಕೆಲಸದ ಪ್ರಮಾಣ ಹೆಚ್ಚಾಯಿತು. ಪ್ರಾರಂಭದಲ್ಲಿ ಕಾಗದವನ್ನು ಕತ್ತರಿಸಲು ಕೈಯಿಂದಲೆ ತಿರುಗಿಸುವ ಯಂತ್ರದಲ್ಲಿ ಕತ್ತರಿಸಬೇಕಾಗಿತ್ತು. ಅದು ಶ್ರಮದ ಕೆಲಸವಾಗಿತ್ತು. ಆದರೂ ಕೂಡ ಮಹಿಳೆಯರು ಅದನ್ನು ಸಂತೋಷವಾಗಿ ಮಾಡುತ್ತಿದ್ದರು. ಕಾಲಾನಂತರ ಅದನ್ನು ವಿದ್ಯುತ್ ಚಾಲಿತ ಯಂತ್ರವನ್ನಾಗಿ ಪರಿವರ್ತಿಸಲಾಯಿತು. ಒಟ್ಟಿನಲ್ಲಿ ಮುದ್ರಣಾಲಯ ವಯಸ್ಕ ಮಹಿಳೆಯರಿಗೂ ಮತ್ತು ಕರುಣಾಗೃಹದ ವಿದ್ಯಾರ್ಥಿಗಳಿಗೂ ದುಡಿಮೆಯ ಅನುಭವವನ್ನು ತಂದುಕೊಟ್ಟಿತು ಮತ್ತು ಅವರಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸಿತು. ಜನಪದ ಮುದ್ರಣಾಲಯದಲ್ಲಿ ತರಬೇತಿ ಪಡೆದ ಮಹಿಳೆಯರೆಲ್ಲರಿಗೂ ಬೇರೆ ಬೇರೆ ಸ್ಥಳಗಳಲ್ಲಿ ಉದ್ಯೋಗವೂ ದೊರೆಯಿತು. ಮುದ್ರಣಾಲಯ ಸುಮಾರು ೨೪ವರ್ಷಗಳ ಕಾಲ ನಡೆಯಿತು. ಮತ್ತು ಒಂದು ಲಕ್ಷ ರೂಪಾಯಿಗಳಿಗೂ ಮಿಕ್ಕಿ ಲಾಭ ತಂದಿತು. ಹೀಗೆ ಮುದ್ರಣಾಲಯದ ಸ್ಥಾಪನೆಯ ಹಿಂದಿದ್ದ ನಿರೀಕ್ಷಣೆ ಕೈಗೂಡಿದಂತಾಯಿತು.

(ಮುಂದುವರೆಯುವುದು)

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಅಭಿನಂದನೆ

೨೦೦೭ ಜನೆವರಿ ಮಾಹೆಯಲ್ಲಿ ತಮ್ಮ ಆಮರಣ ಉಪವಾಸದ ಮೂಲಕ ದೇಶದ ಎಲ್ಲ ೧೮ ರಾಷ್ಟ್ರೀಯ ಭಾಷೆಗಳಿಗೂ ನಾಟಕ ಶಾಲೆ ಮತ್ತು ರೆಪರ್ಟರಿಗಳು ದೊರೆಯುವಂತೆ ಮಾಡಿದ ಶ್ರೀ ಪ್ರಸನ್ನರವರಿಗೆ ಜನಪದ ವಿಚಾರವು ತನ್ನ ಹಾರ್ದಿಕ ಅಭಿನಂದನೆ ಸಲ್ಲಿಸುತ್ತದೆ. ನಾಟಕ ಶಾಲೆಗಳು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಾಧನವಾಗಲೆಂದೂ ಹಾರೈಸುತ್ತದೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com